ಸಂಪುಟ : 9 ಸಂಚಿಕೆ 221 ಪುಟ : 4 ಬೆಲೆ: 3.00 ಬುಧವಾರ ಅಕ್ಟೋಬರ್ 9 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 221 Pages : 4 Price : 3.00 Wednesday October 9 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 9 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ : ವಾರ್ಡ್ ನಂ. 22 ಗಂಗಿಮಡಿ, ದಖನಿಯವರ ಲೈನ್, ಶಿವಪ್ಪರ ಲೈನ್, ಗಿರಣಿ ಲೈನ್, 1600, 1400, 1800 ಮನೆಗಳು, ಈಶ್ವರಗುಡಿ, ದೊಡ್ಡಮಸೂತಿ ಭಾಗ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 11 ರಿಂಗ್ ರೋಡ್, 4ನೇ ಕ್ರಾಸ್. ವಾರ್ಡ್ ನಂ. 3 - ಮಿಷನ್ ಕಾಂಪೌಂಡ್ ಭಾಗ-1, 2, ಬಣ್ಣದ ನಗರ ಪೂರ್ತಿ ಭಾಗಗಳು, ರಾಜಾಜಿ ರೋಡ್, ಕುಂಬಾರ ಓಣಿ, ಹುಯಿಲಗೋಳ ರಸ್ತೆ, ಲಕ್ಕುಂಡಿಯವರ ಲೈನ್, ಅಯ್ಯಪ್ಪಜ್ಜನ ಗದ್ದುಗೆ, ಗಣಪತಿಯವರ ಲೈನ್, ಮಸೂತಿ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 16, 20, 21 - ಗೌಳಿಯವರ ಲೈನ್ 3 ಭಾಗ, ಗಂಗಿಮಡಿ ಹೊಸ ಲೈನ್, ರಹಮತ್ ನಗರ, ಶರೀಫಜ್ಜನ ಗುಡಿ 3 ಭಾಗಗಳು, ಖಾನ ತೋಟ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 6, 10, 5 - ಪೆಂಡಾರ ರೋಡ್, ಕಬಾಡಿಯವರ ಲೈನ್, ಮಾನೆದವರ ಲೈನ್ , ಬಾಗೇವಾಡಿ ಅವರ ಲೈನ್, ಯರಗಟ್ಟಿ ಅವರ ಲೈನ್, ಮುಳಗುಂದರವರ ಲೈನ್, ಸಿಹಿ ನೀರಿನ ಬಾವಿ, ರಂಗಪ್ಪಜ್ಜನ ಮಠ ಉಳಿದ ಕೆಲವು ಭಾಗಗಳು.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದರಿಂದ ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅ.10ರಂದು ಶಿಕ್ಷಣ ಅದಾಲತ್ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಶಾಲಾ ಶಿಕ್ಷಣ ಇಲಾಖೆಯ ನರಗುಂದ ಬ್ಲಾಕ್ ಹಂತದ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಅಕ್ಟೋಬರ್ 10 ರಂದು ಜರುಗಲಿದೆ.

ನರಗುಂದ ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಇತ್ಯರ್ಥ ಆಗಬೇಕಾದ ಯಾವುದಾದರೂ ಪ್ರಕರಣಗಳು ಹಾಗೂ ಶೈಕ್ಷಣಿಕ ಬೋಧನೆ ಕಲಿಕೆಯ ಕುಂದುಕೊರತೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಅಕ್ಟೋಬರ್ 10ರೊಳಗೆ ಸಲ್ಲಿಸಬಹುದಾಗಿದೆ.

ಕಾರ್ಯಕ್ರಮದಲ್ಲಿ ಶಿಕ್ಷಕರ ಶಿಸ್ತು ಪ್ರಕರಣ ಹಾಗು ಇತರೆ ಕುಂದು ಕೊರತೆಗಳ ನಿವಾರಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನರಗುಂದ ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಬಿ.ವಾಯ್. ವಿಜಯೇಂದ್ರ ಭೇಟಿ

■ ವಿಜಯಸಾಕ್ಷಿ ಸುದ್ದಿ, ಗದಗ



ಭಾರತೀಯ ಜನತಾ ಪಾರ್ಟಿಯ ರಾಜ್ಯಾಧ್ಯಕ್ಷರಾದ ಬಿ.ವಾಯ್. ವಿಜಯೇಂದ್ರ ಅವರು ಅ.9ರ ಮಧ್ಯಾಹ್ನ 3.30 ಗಂಟೆಗೆ ಹುಬ್ಬಳ್ಳಿ ರಸ್ತೆಯಲ್ಲಿರುವ ಬಿಜೆಪಿ ಗದಗ ಜಿಲ್ಲಾ ಕಾರ್ಯಾಲಯಕ್ಕೆ ಆಗಮಿಸಿ ಪಕ್ಷದ ಗದಗ ಜಿಲ್ಲಾ ಸದಸ್ಯತಾ ಅಭಿಯಾನದ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ನಂತರ ಅಬ್ಬಿಗೇರಿ ಗ್ರಾಮದ ಶ್ರೀ ರಂಭಾಪುರಿ ಜಗದ್ಗುರುಗಳು ಏರ್ಪಡಿಸಿರುವ ದಸರಾ ದರ್ಬಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಬಿಜೆಪಿ ಗದಗ ಜಿಲ್ಲಾಧ್ಯಕ್ಷರಾದ ತೋಟಪ್ಪ(ರಾಜು) ಕುರುಡಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಗವದ್ಗೀತಾ ಶ್ಲೋಕ ಹೇಳುವ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಎಸ್.ಎಸ್.ಕೆ. ದಸರಾ ಉತ್ಸವ ಸಮಿತಿ ವತಿಯಿಂದ ಅ.9ರ ಸಾಯಂಕಾಲ 7 ಗಂಟೆಗೆ ಎಸ್.ಎಸ್.ಕೆ. ಸಮಾಜದ ಮಹಿಳೆಯರಿಗಾಗಿ ಭಗವದ್ಗೀತಾ ಶ್ಲೋಕ ಹೇಳುವ ಕಾರ್ಯಕ್ರಮ ಜರುಗಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಟಗೇರಿ ಶ್ರೀ ಜಗದಂಬಾ ಮಹಿಳಾ ಮಂಡಳದ ಉಪಾಧ್ಯಕ್ಷರಾದ ಹೇಮಾ ಎಸ್. ಕಬಾಡಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕವಿ, ಗಾಯಕರಾದ ಪದ್ಮಾ ಜೆ.ಕಬಾಡಿ, ಗೌರಾಂಗ ಮಾತಾಜಿ ಆಗಮಿಸಲಿದ್ದಾರೆ. ಈ ಸಂದರ್ಭದಲ್ಲಿ ಬೆಟಗೇರಿ ಶ್ರೀ ಜಗದಂಬಾ ಮಹಿಳಾ ಮಂಡಳದ ಗೌ.ಕಾರ್ಯದರ್ಶಿ ಅಂಬಿಕಾ ಎ.ರಂಗ್ರೇಜ, ಖಜಾಂಚಿ ರತ್ನಾ ಎನ್.ಅರವಟಗಿ, ಬೆಟಗೇರಿ ಎಸ್.ಎಸ್.ಕೆ. ಪಂಚ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ದತ್ತು ಯು. ಪವಾರ, ಬೆಟಗೇರಿ ಎಸ್.ಎಸ್.ಕೆ. ತರುಣ ಸಂಘದ ಅಧ್ಯಕ್ಷರಾದ ಶ್ರೀಕಾಂತಸಾ ರಾಯಬಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


### ದಸರಾ ಧರ್ಮ ಸಮ್ಮೇಳನದ 6ನೇ ದಿನದ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಬದುಕಿನ ಉನ್ನತಿಗೆ ಸಂಸ್ಕಾರವೇ ಅಡಿಪಾಯ

■ ವಿಜಯಸಾಕ್ಷಿ ಸುದ್ದಿ, ಅಬ್ಬಿಗೇರಿ (ಮಾನವ ಧರ್ಮ ಮಂಟಪ)

ಧರ್ಮದ ಚಿಂತನಗಳು ಭಾರತೀಯರ ಬದುಕಿಗೆ ಸಜ್ಜನಿಕೆಯ ಜೀವ ತುಂಬಿವೆ. ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಸಾವಿಲ್ಲದೆಡೆಗೆ ಮುನ್ನಡೆಯುವ ಗುರಿ ನಮ್ಮದಾಗಬೇಕು. ಮನುಷ್ಯ ಸ್ವಾರ್ಥಕ್ಕಾಗಿ ಆದರ್ಶ ಮೌಲ್ಯಗಳನ್ನು ಬಲಿ ಕೊಡಬಾರದು. ಸಂಸ್ಕಾರಯುಕ್ತ ಸಂಸ್ಕೃತಿಯಿಂದ ಬದುಕಿನ ಉನ್ನತಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 6ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.




ಉನ್ನತ ಗುರಿ ಮತ್ತು ಧ್ಯೇಯ ವ್ಯಕ್ತಿತ್ವ ವಿಕಾಸಕ್ಕೆ ದಾರಿದೀಪ. ನದಿಯ ನೀರನ್ನು ಎಷ್ಟು ತುಂಬಿದರೂ ಹೇಗೆ ಖಾಲಿಯಾಗುವುದಿಲ್ಲವೋ ಹಾಗೆಯೇ ಧರ್ಮದ ಅರಿವನ್ನು ಎಷ್ಟು ಅರಿತರೂ ಅದು ಖಾಲಿಯಾಗುವುದಿಲ್ಲ. ಕೆಡಕುಗಳನ್ನು ಮೆಟ್ಟಿ ನಿಂತು ಒಳಿತಿನತ್ತ ಹೆಜ್ಜೆ ಹಾಕುವುದೇ ನಮ್ಮ ಗುರಿಯಾಗಬೇಕು. ಉದಾತ್ತ ಜೀವನ ಮೌಲ್ಯಗಳನ್ನು ಸಂಪಾದಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಿಜವಾದ ಧರ್ಮ. ಸುಂದರ ಶುದ್ಧಗೊಳಿಸುವುದೇ ಧರ್ಮದ ಗುರಿಯಾಗಿದೆ. ವೀರಶೈವ ಧರ್ಮ ಸಂವಿಧಾನದಲ್ಲಿ ಪುರುಷರಷ್ಟೇ ಮಹಿಳೆಯರಿಗೆ ಧರ್ಮಾಚರಣೆಯ ಸಮಾನ ಹಕ್ಕನ್ನು ಬಹಳ ಪ್ರಾಚೀನ ಕಾಲದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಭಾರತೀಯ ಉತ್ಕೃಷ್ಟ ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರವಾಗಿದೆ. ವೀರಶೈವ ಧರ್ಮ ಪೀಠಗಳು ಮಹಿಳೆಯರಿಗೆ ಹಸಿರು ಬಳೆ, ಕುಂಕುಮ, ಕರಿಮಣಿ, ಕಾಲುಂಗುರ ಮುತ್ತು ಹಾಗೂ ಕೊರಳಿನಲ್ಲಿ ಮಾಂಗಲ್ಯ ಕೊಟ್ಟು ಕರುಣಿಸಿದ್ದಾರೆ. ಸಮೃದ್ಧಿ ತ್ಯಾಗ ಔದಾರ್ಯ ಸಮಾನತೆ ಮತ್ತು ಪರಿಪಕ್ವತೆ ಉಂಟು ಮಾಡುವ ಶಕ್ತಿ ಇವುಗಳಲ್ಲಿ ಅಡಗಿದೆ ಎಂದರು.

ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ 'ಕಾವ್ಯ ಕುಸುಮ' ಕೃತಿ ಬಿಡುಗಡೆ ಮಾಡಿ, ಜೀವನ ಮೌಲ್ಯಗಳು ಅಂತ್ಯಗೊಂಡರೆ ಅದರೊಂದಿಗೆ ಮಾನವೀಯತೆ ಅಂತ್ಯವಾಗುತ್ತದೆ. ನಮ್ಮ ಬದುಕು ಇನ್ನೊಬ್ಬರಿಗೆ ಮಾದರಿಯಾಗಬೇಕಲ್ಲದೇ ಮಾರಕವಾಗಬಾರದು. ಲಿಂ.ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳನ್ನು ಕುರಿತು ಬರೆದ ಕಾವ್ಯ ಕುಸುಮ ಕೃತಿಯಲ್ಲಿ ಭಕ್ತ ಸಮುದಾಯದ ಶ್ರೇಯಸ್ಸಿಗೆ ಅವರು ನೀಡಿದ ಜೀವನಾದರ್ಶಗಳನ್ನು ಕಾಣಬಹುದು.

▸▸ 4ನೇ ಪುಟಕ್ಕೆ

**ಗುರುರಕ್ಷೆ**

ಗುರುಲಿಂಗ ಶಿವಾಚಾರ್ಯರು ಗುಂಡಕನಾಳ, ಕೈಲಾಸಲಿಂಗ ಶಿವಾಚಾರ್ಯರು ಹಿರೇಮಠ ಪುರ್ತಗೇರಿ, ಅಭಿನವ ಪಂಚಾಕ್ಷರಿ ಶಿವಾಚಾರ್ಯರು ಅಡ್ನೂರು-ರಾಜೂರು, ಮರುಳಾರಾಧ್ಯ ಶಿವಾಚಾರ್ಯರು ಸಂಸ್ಥಾನ ಹಿರೇಮಠ, ಅಳವಂಡಿ, ಸಿದ್ಧಲಿಂಗ ಶಿವಾಚಾರ್ಯರು ಪಂಚಗೃಹ ಹಿರೇಮಠ ನರಗುಂದ, ಅಯ್ಯಪ್ಪಯ್ಯ ಹುಡಾ ರಾಯಚೂರು, ಎಮ್.ಎ.ಹಿರೇವಡೆಯರ್, ಡಾ.ಪಾರ್ವತಿಬಾಯಿ ಚವಡಿ, ಮಲ್ಲಿಕಾರ್ಜುನ ಕುಂಬಾರ, ರವಿಕುಮಾರ ಪಟ್ಟಣಶೆಟ್ಟರ, ಮಂಜುನಾಥ ಚನ್ನಪ್ಪನವರ, ಮಲ್ಲಿಕಾರ್ಜುನ ಬೆಲ್ಲದ, ನಾಗಪ್ಪ ಮಳಗಲಿ, ಡಾ.ಎಸ್.ವಿ.ವಾಲಿ, ಎ.ಎಮ್.ಕೊಟ್ರೇಶ್ ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು.

**ನಜರ್ ಸಮರ್ಪಣೆ:** ಸಮಾರಂಭದ ನಂತರ ಶ್ರೀ ಪೀಠದ ಸಿಬ್ಬಂದಿ ಹಾಗೂ ಪೀಠಾಭಿಮಾನಿಗಳು, ಆನೆ ಗಜಲಕ್ಷ್ಮಿ ಹಾಗೂ ಹಗಲು ದೀವಟಿಗೆಯ ಮೇಘರಾಜ ಚಕ್ರಸಾಲಿ ಸಲ್ಲಿಸಿದ ನಜರ್ ಸಮರ್ಪಣೆ ಆಕರ್ಷಕವಾಗಿತ್ತು.

**ಅನ್ನ ದಾಸೋಹ:** ಅಬ್ಬಿಗೇರಿ ಗ್ರಾ.ಪಂ ಸದಸ್ಯ ಸುರೇಶ ಸಂಗಪ್ಪ ನಾಯ್ಕರ ಮತ್ತು ಸಹೋದರರಿಂದ ಅನ್ನ ದಾಸೋಹದ ಸೇವೆ ಜರುಗಿತು.

**'ವೀರಶೈವ ಸಿರಿ'**

ರೋಣ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಇವರಿಗೆ 'ವೀರಶೈವ ಸಿರಿ' ಪ್ರಶಸ್ತಿ ಪ್ರದಾನ ಮಾಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು. ನರೇಗಲ್ಲ ಮಲ್ಲಿಕಾರ್ಜುನ ಶಿವಾಚಾರ್ಯರು ಪ್ರಶಸ್ತಿ ವಾಚನ ಮಾಡಿದರು. ಪ್ರಶಸ್ತಿ ಸ್ವೀಕರಿಸಿದ ಜಿ.ಎಸ್. ಪಾಟೀಲ ಮಾತನಾಡಿ, ತಮಗೆ ದೊರೆತ ಪ್ರಶಸ್ತಿ ತಮ್ಮನ್ನು ಇನ್ನೂ ಹೆಚ್ಚು ಸೇವೆ ಮಾಡಲು ಪ್ರೇರೇಪಿಸಿದೆ ಎಂದರು.

### 6ನೇ ದಿನದ ಇಷ್ಟಲಿಂಗ ಮಹಾಪ್ರಜೆಯಲ್ಲಿ ರಂಭಾಪುರಿ ಜಗದ್ಗುರುಗಳ ಆಶೀರ್ವಚನ

# ಮಹಿಳೆಯರು ಧರ್ಮಾಚರಣೆ ಮರೆಯಬಾರದು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಭಾರತ ದೇಶದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನ ಮಾನವಿದೆ. ಇಲ್ಲಿ ಮಹಿಳೆಯರನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಎಲ್ಲಿ ಮಹಿಳೆಯರಿಗೆ ಗೌರವ ಇರುತ್ತದೆಯೋ ಅಲ್ಲಿ ದೇವತೆಗಳು ವಾಸವಿರುತ್ತಾರೆ ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ಹೇಳಿದರು.

ಸಮೀಪದ ಅಬ್ಬಿಗೇರಿ ಗ್ರಾಮದ ಹೊಸ ಹಿರೇಮಠದಲ್ಲಿ 6ನೇ ದಿನದ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿದ ನಂತರ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಯಾವುದೇ ಮನೆಯಲ್ಲಿ ಮಹಿಳೆ ನಗುನಗುತ್ತ ಇದ್ದರೆ ಆ ಮನೆ ಆನಂದದಿಂದ ಇರುತ್ತದೆ. ಇದರಿಂದ ಗಂಡನ ಮನೆಗೂ, ತವರು ಮನೆಗೂ ಒಳ್ಳೆಯದಾಗುತ್ತದೆ. ಅದಕ್ಕಾಗಿ ಮದುವೆಯಾಗಿ ಮನೆಗೆ ಬಂದ ಮಹಿಳೆಯನ್ನು ಗಂಡನ ಮನೆಯವರು ಚೆನ್ನಾಗಿ ನೋಡಿಕೊಳ್ಳಬೇಕು. ಇಂದಿನ ದಿನಗಳಲ್ಲಿ ಚಿಕ್ಕಪುಟ್ಟ ವಿಚಾರಗಳಿಗೆ



ಕುಟುಂಬಗಳು ಶಿಥಿಲವಾಗುವುದನ್ನು ಕಾಣುತ್ತಿದ್ದೇವೆ. ಗಂಡ-ಹೆಂಡಿರಿಬ್ಬರೂ ಸಂಸಾರವೆಂಬ ರಥದ ಎರಡು ಗಾಲಿಗಳು. ಎರಡೂ ಸಮನಾಗಿ ಚಲಿಸಿದಾಗ ಜೀವನವೆಂಬ ರಥ ಚೆನ್ನಾಗಿ ಓಡುತ್ತದೆ. ಅದಕ್ಕಾಗಿ ನೀವು ನಿಮ್ಮ ಬಾಳು ಎಂದಿಗೂ ಶಿಥಿಲವಾಗದಂತೆ ನೋಡಿಕೊಳ್ಳಿ ಎಂದು ಜಗದ್ಗುರುಗಳು ಮಹಿಳೆಯರಿಗೆ ಕಿವಿಮಾತು ಹೇಳಿದರು.

ಮಹಿಳೆಯರಲ್ಲಿ ಧರ್ಮಾಚರಣೆ, ತ್ಯಾಗ, ಕಷ್ಟ ಸಹಿಷ್ಣುತೆ, ಪ್ರಾಮಾಣಿಕತೆ ಎಂಬಿತ್ಯಾದಿ ಗುಣಗಳಿರುವುದರಿಂದ ಅವರನ್ನು ಪೂಜ್ಯನೀಯ ಭಾವನೆಯಿಂದ ನೋಡಲಾಗುತ್ತಿದೆ. ಆಧುನಿಕತೆಯ ಹೆಸರಿನಲ್ಲಿ ಇಂದಿನ ಮಹಿಳೆಯರು ಕುಂಕುಮವನ್ನು ಇಡುವದರ ಬದಲಿಗೆ ಟಿಕಳಿಗಳನ್ನು ಇಡುತ್ತಿರುವುದು ವಿಷಾದನೀಯ ಎಂದು ತಿಳಿಸಿದ ಜಗದ್ಗುರುಗಳು, ನಿಮಗೆ ಅದೆಷ್ಟೇ ಕಷ್ಟವಾದರೂ ನೀವು ಹಣೆಗೆ ಕುಂಕುಮವನ್ನು ಇಡುವುದನ್ನು ರೂಢಿಸಿಕೊಳ್ಳುವ ಪ್ರತಿಜ್ಞೆ ಮಾಡಿ. ಅಂದರೆ ಅಬ್ಬಿಗೇರಿಯಲ್ಲಿ ದಸರಾ ಮಹೋತ್ಸವ ನೆರವೇರಿಸಿದ್ದು ಸಾರ್ಥಕವೆನ್ನಿಸುತ್ತದೆ ಎಂದು ಜಗದ್ಗುರುಗಳು ತಿಳಿಸಿದರು.

ಇಷ್ಟಲಿಂಗ ಮಹಾಪೂಜೆಯ ಸಮಯದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಸಭೆಯನ್ನುದ್ದೇಶಿಸಿ ಸಂಯುಕ್ತಾ ಬಂಡಿ, ನರೇಗಲ್ಲ ಹಿರೇಮಠದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಮಾತನಾಡಿದರು. ವೇದಿಕೆಯ ಮೇಲೆ ಸಂಸದ ಬಸವರಾಜ ಬೊಮ್ಮಾಯಿಯವರ ಧರ್ಮಪತ್ನಿ ಚನ್ನಮ್ಮ ಉಪಸ್ಥಿತರಿದ್ದರು.

ನಮ್ಮ ಪಂಚ ಪೀಠಗಳಿವೆ. ಈ ಐದೂ ಪೀಠಗಳು ಎಂದಿಗೂ ಜನರ ಬದುಕು ಹಸನಾಗಿರಬೇಕು ಎಂಬುದನ್ನೇ ಬಯಸುತ್ತವೆ. ಪ್ರತಿಯೊಂದು ಪೀಠಕ್ಕೂ ಅದರದೇ ಆದ ಧ್ವಜವಿದೆ. ಪ್ರತಿ ಧ್ವಜದ ಬಣ್ಣವೂ ಒಂದೊಂದು ಸಂಕೇತವನ್ನು ಸೂಚಿಸುತ್ತವೆ. ಈ ಐದೂ ಬಣ್ಣಗಳ ಸಂಕೇತಗಳನ್ನು ಒಳಗೊಂಡಿರುವ ಮಹಿಳೆಯೇ ಮುತ್ತೈದೆ ಎಂದು ಕರೆಯಿಸಿಕೊಳ್ಳುತ್ತಾಳೆ. ಪೀಠಗಳಿಗೆ ಮತ್ತು ಮಾತೆಯರಿಗೆ ಅವಿನಾಭಾವ ಸಂಬಂಧವಿದೆ. ಆದರೆ ಕೆಲವು ಜನ ವಿಚಾರವಾದಿಗಳು, ಮಠಾಧೀಶರು ಈ ಸಂಬಂಧವನ್ನು ಹಾಳು ಮಾಡಲು ನೋಡಿದರು. ಆದರೆ ಅವರು ಯಶ ಕಾಣಲಿಲ್ಲ ಎಂದು ಶ್ರೀಗಳು ತಿಳಿಸಿದರು.

### ಅನಿಲ ಮೆಣಸಿನಕಾಯಿ ಜನ್ಮದಿನದ ಪ್ರಯುಕ್ತ 'ಔದಾರ್ಯ ದಿನ' ಆಚರಣೆ

# ಅನಿಲರ ಕನಸು ನನಸಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸೋಮೇಶ ಹಿರೇಮಠ ಪ್ರತಿಷ್ಠಾನ, ವೆಂಕಟೇಶ ದಾಸರ ಅಭಿಮಾನಿ ಬಳಗ, ಪ್ರವೀಣ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಬಿಜೆಪಿ ಮುಖಂಡ, ಕೃತಪುರದ ಕಣ್ಮಣಿ ಅನಿಲ ಮೆಣಸಿನಕಾಯಿಯವರ 50ನೇ ವರ್ಷದ ಜನ್ಮದಿನದ ನಿಮಿತ್ತ ನಗರದ ಕಾಶಿ ವೈದಿಕ ಪಾಠಶಾಲೆಯಲ್ಲಿರುವ ಕಾಶಿ ವಿಶ್ವನಾಥ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿ ವೈದಿಕ ವಿದ್ಯಾರ್ಥಿಗಳಿಗೆ ಸಿಹಿ ಹಂಚುವುದರೊಂದಿಗೆ ಆಚರಿಸಲಾಯಿತು.

ಸೋಮೇಶ ಹಿರೇಮಠ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವಣ್ಣೆಯ್ಯ ಹಿರೇಮಠ ಮಾತನಾಡಿ, ಕೊರೋನಾ ಕಷ್ಟಕಾಲದಲ್ಲಿ ಮನುಕುಲಕ್ಕಾಗಿ ಭಿಕ್ಷೆ ಎಂಬ ನೂತನ



ಕಾರ್ಯಕ್ರಮವನ್ನು ಅಳವಡಿಸಿಕೊಂಡು ನಮ್ಮ ಕೃತಪುರಕ್ಕೆ ಕರ್ಣನಾಗಿ ಬಂದು ಸಾವಿರಾರು ಜನರ ಹಸಿವನ್ನು ನೀಗಿಸಿದವರು ಅನಿಲ್ ಮೆಣಸಿಕಾಯಿ. ಅವರು ಮತದಾರರಿಂದಲೇ ಒಂದು ರೂಪಾಯಿ ನಾಣ್ಯ, ಒಂದು ರೊಟ್ಟಿಯನ್ನು ಪಡೆದುಕೊಂಡು ಮತ ಪಡೆದುಕೊಂಡವರಿಗೆ ರೊಟ್ಟಿಯ ಋಣ ಇರಬೇಕೆಂದು ಸಂದೇಶ ನೀಡಿದ್ದಾರಲ್ಲದೆ, ಗದಗ ನಗರವನ್ನು ಹಸಿರು ಪಟ್ಟಣವನ್ನಾಗಿಸಬೇಕು.

▸▸ 2ನೇ ಪುಟಕ್ಕೆ

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮುಖಂಡ ಮಹೇಶ ದಾಸರ, ಅನಿಲ ಮೆಣಸಿನಕಾಯಿಯವರು ಗದಗ ಭಾಗದ ಯುವಕರಿಗೆ ಕ್ರೀಡಾ ಸ್ಫೂರ್ತಿ ತುಂಬಿದ್ದಾರೆ. ಗದಗ ಜನರ ಜನಮನ ಗೆದ್ದ ಬಿ.ಶ್ರೀರಾಮುಲು ಅವರು ನಡೆಸಿಕೊಂಡು ಬರುತ್ತಿದ್ದ ಸಾಮೂಹಿಕ ವಿವಾಹಗಳಲ್ಲಿ ಮುಂದಾಳತ್ವ ವಹಿಸಿ ಯಶಸ್ವಿಗೊಳಿಸಿದ್ದಾರೆ. ಗದಗ ಹಬ್ಬದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಮನ ಸೆಳೆದಿದ್ದು, ಅವರು ಆರೋಗ್ಯಪೂರ್ಣವಾಗಿ ನೂರಕ್ಕು ಹೆಚ್ಚು ವರ್ಷಗಳ ಕಾಲ ಬಾಳಲಿ, ಅಧಿಕಾರ ಎಂಬುದು ಅವರನ್ನು ಹುಡುಕಿಕೊಂಡು ಬರಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು.

## ಗ್ರಾ.ಪಂ ನೌಕರ ವೃಂದದ ಪ್ರತಿಭಟನೆ

■ ವಿಜಯಸಾಕ್ಷಿ ಸುದ್ದಿ, ಗದಗ



ಹಲವು ವರ್ಷಗಳ ಬೇಡಿಕೆಗಳ ಈಡೇರಿಕೆಗಾಗಿ ಗ್ರಾಮ ಪಂಚಾಯಿತಿ ನೌಕರ ವೃಂದ ಹಾಗೂ ಜನಪ್ರತಿನಿಧಿಗಳು ಜಿಲ್ಲಾಡಳಿತದ ಎದುರು ಪ್ರತಿಭಟನೆ ನಡೆಸಿದ್ದಾರೆ.

ಅ.4ರಿಂದ ಗ್ರಾಮ ಪಂಚಾಯಿತಿಯ ಎಲ್ಲಾ ಆನ್‌ಲೈನ್ ಸೇವೆಗಳನ್ನು ಸ್ಥಗಿತಗೊಳಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟ ಅವಧಿಯವರೆಗೆ ಧರಣಿ ಸತ್ಯಾಗ್ರಹ ಮಾಡಲಾಗಿತ್ತು. ರಾಜ್ಯ ಸರಕಾರ ಸಂಘಗಳ ಬೇಡಿಕೆಗೆ ಸ್ಪಂದಿಸದೇ ಇರುವುದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್‌ನ ಎಲ್ಲಾ ವೃಂದ ಸಂಘಗಳು ಹಾಗೂ ಗ್ರಾ.ಪಂ ಸದಸ್ಯರ ಒಕ್ಕೂಟದ ಸಹಯೋಗದಲ್ಲಿ ಹೋರಾಟವನ್ನು ಆಯಾ ಜಿಲ್ಲಾ ಕೇಂದ್ರದಲ್ಲಿ ಎಲ್ಲಾ ವೃಂದ ಸಂಘಗಳು ಪ್ರತಿಭಟನೆಯನ್ನು ಅನಿರ್ದಿಷ್ಟ ಅವಧಿಗೆ ಹಮ್ಮಿಕೊಂಡಿವೆ.

ಪ್ರತಿಭಟನೆಯ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ-ಗದಗ ಕ್ಷೇತ್ರದ ಸಂಸದ ಬಸವರಾಜ ಬೊಮಾಯಿ ಭೇಟಿ ನೀಡಿ, ಪ್ರತಿಭಟನಾಕಾರರ ಮನವಿಯನ್ನು ಆಲಿಸಿ ಸಂಬಂಧಿಸಿದವರೊಂದಿಗೆ ಮಾತನಾಡಿ, ರಾಜ್ಯ ಸರಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಸರಕಾರ ನಮ್ಮ ಬೇಡಿಕೆಗಳನ್ನು ಈಡೇರಿ ಸುವವರೆಗೂ ಪ್ರತಿಭಟನೆ ಮುಂದುವರೆಯುತ್ತದೆ, ಅಲ್ಲಿಯವರೆಗೆ ಗ್ರಾಮ ಪಂಚಾಯಿತಿಯ ಯಾವುದೇ ಸೇವೆಗಳನ್ನು ನೀಡಲಾಗುವುದಿಲ್ಲ ಎಂದು ಎಲ್ಲಾ ವೃಂದ ಸಂಘಗಳ ಒಕ್ಕೂಟ ನಿರ್ಧರಿಸಿರುವುದಾಗಿ ಪಿ.ಡಿ.ಒ ಸಂಘದ ಜಿಲ್ಲಾಧ್ಯಕ್ಷ ಕುಮಾರ ಪೂಜಾರ ತಿಳಿಸಿದರು.

# ವಸತಿ ನಿಲಯಗಳಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿಗೆ ಗದಗ ಜಿಲ್ಲಾ ವ್ಯಾಪ್ತಿಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸ್, ಸಾಮಾನ್ಯ ಪದವಿ ಮಟ್ಟದ ಕೋರ್ಸ್, ವೃತ್ತಿಪರ ಕೋರ್ಸ್, ಸ್ನಾತಕೋತ್ತರ ಕೋರ್ಸಿನ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ ಹಾಗೂ ಪಾರ್ಸಿ ಹಾಗೂ ಇತರೆ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ನವ್ಹೆಂಬರ್ 11.ರೊಳಗೆ https://shp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಿಲರ ಕನಸು ನನಸಾಗಲಿ

▶▶ ಮೊದಲನೇ ಪುಟದಿಂದ

ಕ್ರೀಡಾ ನಗರವನ್ನಾಗಿಸಬೇಕೆಂಬ ಅವರ ಕನಸಿನ ಸಂಕಲ್ಪವಷ್ಟೇ ಅಲ್ಲದೆ, ಗದಗ ಭಾಗದಲ್ಲಿ ಸಮನ್ವಯ ಮಂದಿರದ ಕನಸು ನನಸಾಗಲಿ. ಅವರ ಐವತ್ತನೇ ವರ್ಷದ ಜನ್ಮದಿನವನ್ನು 'ಔದಾರ್ಯ ದಿನ'ವನ್ನಾಗಿ ನಮ್ಮ ಸಂಘಟನೆಗಳು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ವೆಂಕಟೇಶ ಆರ್.ಬೇಲೂರು, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷರಾದ ತಿಮ್ಮಣ್ಣ ಡೋಣಿ, ಕರ್ನಾಟಕ ರಕ್ಷಣಾ ವೇದಿಕೆಯ ಮುಖಂಡರಾದ ಹನುಮಂತಸಾ ಶಿದ್ದಲಿಂಗ, ಗಂಗಾವತಿಯ ಪ್ರಥಮ ದರ್ಜೆ ಗುತ್ತಿಗೆದಾರರಾದ ಕೊಡ್ಲಿ, ಅಂಬರೀಶ್ ಕೆಂಚರಳ್ಳಿ ಉಪಸ್ಥಿತರಿದ್ದರು. ಕಾರ್ಯಕ್ರಮವು ಕಾಶಿ ವೈದಿಕ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ವೇದಮೂರ್ತಿ ಶ್ರೀ ಗುರು ಸಿದ್ದಯ್ಯನವರು ಹಿರೇಮಠ ಇವರ ಸಮ್ಮುಖದಲ್ಲಿ ಜರುಗಿತು.

# ಕ್ಯಾಂಪಸ್ ಸಂದರ್ಶನ ಅ.10ಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ, ತಾಂತ್ರಿಕ ಶಿಕ್ಷಣದಲ್ಲಿ ಹೆಸರುವಾಸಿಯಾಗಿ 30 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್ ವತಿಯಿಂದ ಅ.10ರಂದು ಮುಂಜಾನೆ 10 ಗಂಟೆಗೆ UKB CONSTRUCTION MANAGEMENT PVT LTD(ಯು ಕೆ ಬಿ ಕನಸ್ಟ್ರಕ್ಷನ್ ಮ್ಯಾನೇಜ್‌ಮೆಂಟ್) ಕಂಪನಿ ವತಿಯಿಂದ ಕ್ಯಾಂಪಸ್ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಡಿಪ್ಲೋಮಾ ಮತ್ತು ಇಂಜಿನಿಯರಿಂಗ್ ಸಿವ್ಹಿಲ್ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಇದರ ಸದುಪಯೋಗ ಪಡೆಯಬಹುದಾಗಿದ್ದು, 0-3 ವರ್ಷಗಳವರೆಗಿನ ಅನುಭವವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವದು ಎಂದು ಕಾಲೇಜಿನ ಪ್ರಾಚಾರ್ಯ ಕೆ.ಎನ್ ರೇವಣಕರ, ಕಾಲೇಜಿನ ಉದ್ಯೋಗಾಧಿಕಾರಿ ರವಿ ಜೀವನಗೌಡರ ಹಾಗೂ ಸಿವ್ಹಿಲ್(ಪಿಎಚ್‌ಇ) ವಿಭಾಗದ ಮುಖ್ಯಸ್ಥ ರಾಜು ಬೆನಕನಕೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.14ರಂದು ಶಹರ ವಲಯದ ಶಿಕ್ಷಣ ಅದಾಲತ್

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಶಾಲಾ ಶಿಕ್ಷಣ ಇಲಾಖೆಯ ಗದಗ ಶಹರ ವಲಯದ ಬ್ಲಾಕ್ ಹಂತದ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಅಕ್ಟೋಬರ್ 14 ರಂದು ಏರ್ಪಡಿಸಲಾಗಿದೆ.

ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಇತ್ಯರ್ಥ ಆಗಬೇಕಾದ ಯಾವುದಾದರೂ ಪ್ರಕರಣಗಳು ಹಾಗೂ ಶೈಕ್ಷಣಿಕ ಬೋಧನೆ ಕಲಿಕೆಯ ಕುಂದುಕೊರತೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಅಕ್ಟೋಬರ್ 10 ಸಂಜೆ 5.30 ರೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ ಮತ್ತು ಶಿಕ್ಷಕರಿಗೆ ಅವರ ಸೇವಾ ಪುಸ್ತಕವನ್ನು ಪರಿಶೀಲನೆಗಾಗಿ ನೀಡಲಾಗುವುದು. ಏನಾದರೂ ವ್ಯತ್ಯಾಸಗಳಿದ್ದಲ್ಲಿ ಕಚೇರಿಗೆ ಸಂಪರ್ಕಿಸಿ ಅಂದೇ ಸರಿಪಡಿಸಿಕೊಳ್ಳಲು ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ

# ಕಿರಿಯರಿಗೆ ಬೆಂಬಲಿಸಿ ರಾಜೀನಾಮೆ ಕೊಟ್ಟ 45ಕ್ಕೂ ಹೆಚ್ಚು ಹಿರಿಯ ವೈದ್ಯರು



■ ವಿಜಯಸಾಕ್ಷಿ ಸುದ್ದಿ, ಕಲ್ಕತ್ತಾ

ಈ ವರ್ಷದ ಆಗಸ್ಟ್‌ನಲ್ಲಿ ಆಸ್ಪತ್ರೆಯ ಆವರಣದಲ್ಲಿ ಕಿರಿಯ ವೈದ್ಯೆಯ ಅಮಾನುಷ ಅತ್ಯಾಚಾರ ಮತ್ತು ಹತ್ಯೆಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ಒಗ್ಗಟ್ಟು ವ್ಯಕ್ತಪಡಿಸಿ ಆರ್‌ಜಿ ಕರ್ ಮೆಡಿಕಲ್ ಸೆಂಟರ್ ಮತ್ತು ಆಸ್ಪತ್ರೆಯ 45 ಕ್ಕೂ ಹೆಚ್ಚು ಹಿರಿಯ ವೈದ್ಯರು, ಅಧ್ಯಾಪಕರು ಮಂಗಳವಾರ ರಾಜೀನಾಮೆ ನೀಡಿದರು.

ತಮ್ಮ ರಾಜೀನಾಮೆಯಲ್ಲಿ ಹಿರಿಯ ವೈದ್ಯರು, "ಕಿರಿಯ ಸಹೋದ್ಯೋಗಿಗಳ ಬೇಡಿಕೆಗಳನ್ನು ಈಡೇರಿಸಿಲ್ಲ. ವೈದ್ಯೆ ಅತ್ಯಾಚಾರ ಮತ್ತು ಕೊಲೆಗೆ ಸಂಬಂಧಿಸಿದ ತನಿಖೆಯಲ್ಲಿ ಯಾವುದೇ ಬೆಳವಣಿಗೆಯಾಗಿಲ್ಲ" ಎಂದು ಪ್ರತಿಪಾದಿಸಿದರು. ವೈದ್ಯರಿಗೆ ನ್ಯಾಯಕ್ಕಾಗಿ ಆಗ್ರಹಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಪ್ರತಿಭಟನಾ ನಿರತ ವೈದ್ಯರೊಂದಿಗೆ ಆರ್‌ಜಿ ಕರ್ ಆಸ್ಪತ್ರೆಯ ಆಡಳಿತವು ರಾಜಿ ಮಾಡಿಕೊಳ್ಳುವಂತೆ ಒತ್ತಾಯಿಸಿದರು.

ಪ್ರಸ್ತುತ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಪ್ರತಿಭಟನಾನಿರತ ವೈದ್ಯರ ಆರೋಗ್ಯ ಹದಗೆಟ್ಟಿದ್ದು, ಪ್ರತಿಭಟನಾ ನಿರತ ವೈದ್ಯರು ಹಾಗೂ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ವೈದ್ಯರೊಂದಿಗೆ ಸರ್ಕಾರ ರಾಜಿ ಸಂಧಾನಕ್ಕೆ ಮುಂದಾಗಬೇಕು ಎಂದು ಹಿರಿಯ ವೈದ್ಯರು ಆರ್.ಜಿ. ಕರ್ ಆಡಳಿತ ಮಂಡಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

## ನಿಧನ ವಾರ್ತೆ


### ಅನಸೂಯಾ ವೈಕುಂಠೆ



ಗದಗ: ಭಾವಸಾರ ಸಮಾಜದ ಹಿರಿಯರಾದ ಬೆಟಗೇರಿ ಟೆಂಗಿನಕಾಯಿ ಬಜಾರದ ವೀರಭದ್ರೇಶ್ವರ ದೇವಸ್ಥಾನದ ಎದುರಿನ ನಿವಾಸಿ ಅನಸೂಯಾ ಮಾರುತಿರಾವ್ ವೈಕುಂಠೆ (73) ಅ. 8ರಂದು ಮುಂಜಾನೆ ನಿಧನರಾದರು. ಡಾ.ದತ್ತಾತ್ರೇಯ ವೈಕುಂಠೆ ಸೇರಿದಂತೆ ಈರ್ವರು ಪುತ್ರ, ಈರ್ವರು ಪುತ್ರಿಯರು, ಸೊಸೆ, ಮೊಮ್ಮಕ್ಕಳನ್ನು ಬಿಟ್ಟು ಅಗಲಿರುವ ಮೃತರ ಅಂತ್ಯಕ್ರಿಯೆಯು ಅ. 9ರಂದು ಮುಂಜಾನೆ 11 ಗಂಟೆಗೆ ಬೆಟಗೇರಿಯ ಮುಕ್ತಿಧಾಮದಲ್ಲಿ ಜರುಗಲಿದೆ.

ಮೊಮ್ಮಗನಿಗೊಂದು ಪತ್ರ

# ಹಳೆಯ ಬೇರಿನೊಡಲ ಮಾತು



ಮುದ್ದು ಮೊಮ್ಮಗನೇ...

ಹೇಗಿದ್ದೀಯಾ? ಇನ್ನೇನು ಪದವಿ ಮುಗಿಸುವ ನೀನು ಜೀವನದ ಬಣ್ಣಬಣ್ಣದ ಚಿತ್ತಾರಗಳ ಸವಿಯನ್ನು ಸವಿಯುತ್ತಿರುವೆ. ಜವಾಬ್ದಾರಿಗಳ ಹಂಗಿಲ್ಲದ, ಯಾವುದೇ ಕಿರಿಕಿರಿ ಇಲ್ಲದ ಯೌವನದ ಈ ದಿನಗಳು ಮತ್ತೆ ಬರುವುದಿಲ್ಲ. ಬೊಗಸೆಯಲ್ಲಿನ ನೀರಿನಂತೆ ಸೋರಿ ಹೋಗುವ ನಿನ್ನ ಯೌವ್ವನದ ದಿನಗಳನ್ನು ಸಾಧ್ಯವಾದಷ್ಟು ಸುಂದರವಾಗಿ ಕಾಯ್ದಿಟ್ಟುಕೊಳ್ಳುವ ಜವಾಬ್ದಾರಿ ನಿನ್ನದು. ನಿನ್ನ ಮುಂದಿನ ಬದುಕಿಗೆ ಅಡಿಪಾಯ ಹಾಕುವ ಈ ಯವ್ವನದ ದಿನಗಳು ನಿನ್ನ ವೃದ್ಯಾಪ್ಯದಲ್ಲಿ ಕೆಟ್ಟ ಕನಸಿನಂತೆ ಭಾಸವಾಗಬಾರದು ಎಂಬ ಕಳಕಳಿಯಿಂದ ನಿನಗೆ ಈ ಪತ್ರ ಬರೆಯುತ್ತಿದ್ದೇನೆ.

ಹೆಣ್ಣು ಮಕ್ಕಳ ಹಿಂದೆ ಬೀಳಬೇಡ, ನಿನ್ನ ಗುರಿಯನ್ನು ಬೆನ್ನಟ್ಟು. ನಿನ್ನ ಶೈಕ್ಷಣಿಕ ಅರ್ಹತೆಯನ್ನು ಉನ್ನತಗೊಳಿಸು. ಒಳ್ಳೆಯ ಉದ್ಯೋಗವನ್ನು ಸಂಪಾದಿಸಲು, ನಿನ್ನ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವತ್ತ ಲಕ್ಷ್ಯ ಕೊಡು. ಉತ್ತಮ ಆರ್ಥಿಕ ಪರಿಸ್ಥಿತಿ ನಿನ್ನದಾದಾಗ ಅದರಲ್ಲಿ ತುಸು ಭಾಗ ಅವಶ್ಯಕತೆ ಇರುವವರಿಗೆ ಕೊಡುವಲ್ಲಿ ಹಿಂಜರಿಯಬೇಡ. ಇದು ನಿನ್ನ ಸಾಮಾಜಿಕ ಜವಾಬ್ದಾರಿ.

ನಿನ್ನ ಒಳ್ಳೆಯ ಓದು ಮತ್ತು ಜಾಣ್ಮೆಗಳು ನಿನಗೆ ಉತ್ತಮ ಕೆಲಸವನ್ನು ಸಂಪಾದಿಸಲು ಸಹಾಯ ಮಾಡಿದರೆ, ನಿನ್ನ ಬದ್ಧತೆ ಮತ್ತು ನೈಪುಣ್ಯತೆಗಳು ಆ ಕೆಲಸದಲ್ಲಿ ಉನ್ನತಿಗೇರಲು ನಿನಗೆ ಸಹಾಯವಾಗುತ್ತದೆ. ಚೆನ್ನಾಗಿ ದುಡಿದು ಸಂಪಾದಿಸು. ಜೊತೆಗೆ ಸ್ವಲ್ಪ ಉಳಿತಾಯವನ್ನು ಕೂಡ ಮಾಡು. ಸಾಲ ಮಾಡಿ ಐಷಾರಾಮಿ ವಸ್ತುಗಳನ್ನು ಖರೀದಿಸುವ ಆಸೆ ಬೇಡ. ವಸ್ತುಗಳ, ವ್ಯಕ್ತಿಗಳ ಮೌಲ್ಯವನ್ನು ಅರಿ, ಐಷಾರಾಮಿ ವಸ್ತುಗಳ ಮೌಲ್ಯವನ್ನಲ್ಲ. ನಿಜವಾದ ಐಷಾರಾಮ ಇರುವುದು ನಿನ್ನಮ್ಮನ ತೊಡೆಯ ಮೇಲೆ ಮಲಗಿದಾಗ ನಿನ್ನಲ್ಲಿ ಮೂಡುವ ಸಂತೃಪ್ತಿಯಲ್ಲಿ ಅಡಗಿದೆ. ಅಪ್ಪ ಪ್ರೀತಿಯಿಂದ ತಂದುಕೊಟ್ಟ ವಸ್ತುಗಳಲ್ಲಿ, ಒಡಹುಟ್ಟಿದವರ ಒಡನಾಟದಲ್ಲಿ, ಸ್ನೇಹಿತರ ವಿಶ್ವಾಸದಲ್ಲಿ ಇದೆ ಎಂಬುದು ನೆನಪಿರಲಿ.

ಎಲ್ಲರಿಗಿಂತ ಮುಂದೆ ಇರಬೇಕೆಂದು ಬಯಸುವ ವ್ಯಕ್ತಿ ನೀನಾದರೆ ಸಮಯವನ್ನು ವೃಥಾ ಹಾಳು ಮಾಡಬೇಡ. ನಿನ್ನ ಶಕ್ತಿ ಮತ್ತು ಜಾಣ್ಮೆಯನ್ನು ಹೆಚ್ಚಿಸಿಕೊಳ್ಳಲು ನಿನ್ನ ಸಮಯ ಮೀಸಲಾಗಿರಲಿ. ನಿನಗೆ ದುಡಿಯುವ, ಹಣ ಗಳಿಸುವ, ಖರೀದಿಸುವ, ಮಾರುವ, ಮಾತನಾಡಲು ಕಲಿಸುವ, ಬೇರೊಂದು ಭಾಷೆಯನ್ನು ಕಲಿಯುವ, ಹೊಸ ವಿಷಯಗಳನ್ನು ಅರಿಯುವ ಔದ್ಯೋಗಿಕ ಕೌಶಲ್ಯಗಳನ್ನು ನಿನ್ನದಾಗಿಸಿಕೊಳ್ಳುವಲ್ಲಿ ನಿನ್ನ ಸಮಯದ ವಿನಿಯೋಗವಾಗಲಿ.

ಮುಂದೆ ನೀನು ಮದುವೆಯಾದರೆ ಮನೆ ಮತ್ತು ಕುಟುಂಬದ ಜವಾಬ್ದಾರಿ ತೆಗೆದುಕೊಳ್ಳುವ ವ್ಯಕ್ತಿ ನೀನಾಗು. ನಿನ್ನ ಪತ್ನಿಗೆ ಒಳ್ಳೆಯ ಸಂಗಾತಿಯಾಗು. ನಿನ್ನ ಹೆತ್ತವರು ಪತ್ನಿ ಮತ್ತು ಮಕ್ಕಳ ಜವಾಬ್ದಾರಿಯಿಂದ ನೀನು ತಪ್ಪಿಸಿಕೊಳ್ಳಲಾರೆ. ಇಂತಹ ಸಮಯದಲ್ಲಿ ಅಪ್ಪನಾಗಿ ನೀನು ಅವರ ಅವಶ್ಯಕತೆಗಳನ್ನು ಪೂರೈಸುವ, ಅವರ ರಕ್ಷಕನಾಗಿ ಮಾರ್ಗದರ್ಶಕನಾಗಿ ನಿನ್ನ ಕರ್ತವ್ಯವನ್ನು ಚೆನ್ನಾಗಿ ನಿಭಾಯಿಸು. ಒಳ್ಳೆಯ ತಂದೆಯಾಗಿ ಪ್ರೇರಕನಾಗಿ ನಿನ್ನ ಮಕ್ಕಳ ಬೆನ್ನ ಹಿಂದೆ ಸದಾ ನೀನಿರುವೆ ಎಂಬ ಭರವಸೆ ನನಗಿದೆ.

ನಿನ್ನ ಉದ್ಯೋಗ ನಿಮಿತ್ತ ನೀನು ಬೇರೆ ಊರಿಗೆ ಹೋಗುವ ಪ್ರಸಂಗ ಬಂದಾಗ ಬೇಜವಾಬ್ದಾರಿಯಿಂದ ವರ್ತಿಸಬೇಡ. ಬದುಕಿನ ಸಂತೆಯಲ್ಲಿ ಸಣ್ಣಪುಟ್ಟ ವಿಷಯಗಳಿಗೆ ತಲೆಕೆಡಿಸಿಕೊಳ್ಳುವುದು ಬೇಡ. ಕಲಿಕೆ ಒಂದು ನಿರಂತರ ಪ್ರಕ್ರಿಯೆ. ನಿಜವಾದ ಯಶಸ್ವಿ ಮನುಷ್ಯ ಜೀವಿತದ ಕೊನೆಯವರೆಗೂ ಕಲಿಯುತ್ತಲೇ ಸಾಗುತ್ತಾನೆ. ಆದ್ದರಿಂದ, ನಿನ್ನ ಉಳಿದ ಸಮಯವನ್ನು ತರಬೇತಿ, ಪುಸ್ತಕಗಳು ಸಮಾಲೋಚನೆಗಳಲ್ಲಿ ಸಮರ್ಪಕವಾಗಿ ಬಳಸಿಕೊಂಡು ಬದುಕಿನ ಹೊಸ ಹೊಸ ಅವಕಾಶಗಳನ್ನು ನಿನ್ನದಾಗಿಸಿಕೋ.

ಹೆಣ್ಣು ಮಕ್ಕಳ ಮಾನಸಿಕ ಸ್ಥಿತಿಯನ್ನು ಅರ್ಥ ಮಾಡಿಕೋ. ಪುರುಷಾಹಂಕಾರವನ್ನು ಸಹಿಸುವ ಹೆಣ್ಣು ಮಕ್ಕಳು ಮಾನಸಿಕವಾಗಿ ಮುರಿದು ಹೋಗಿರುತ್ತಾರೆ. ಆದ್ದರಿಂದ ನೀನು ಮದುವೆಯಾಗುವ ಹೆಣ್ಣು ಮಗುವಿನ ಕುರಿತು ಬರೀ ಪ್ರೀತಿ, ಪ್ರೇಮದ ಭಾವನೆ ಬೇಡ. ಜೊತೆಗೆ ಕಾಳಜಿ, ಅಕ್ಕರೆ, ಆಕೆಯ ತೊಂದರೆಗಳ ಕುರಿತ ಅರಿವು ಹೊಂದುವುದನ್ನು ಕಲಿ. ದೈಹಿಕ ಸೌಂದರ್ಯಕ್ಕಿಂತ ಮಾನಸಿಕ ಸೌಂದರ್ಯ, ಸ್ಥಿರತೆಯನ್ನು ಹೊಂದಿರುವ ಹೆಣ್ಣು ಮಗು ನಿನಗೆ ಸಂಗಾತಿಯಾಗಿ ಬರಲಿ.

ಬಹಳಷ್ಟು ಬಾರಿ ನಿನ್ನ ತಾಳ್ಮೆಯನ್ನು ನಿನ್ನ ವಿಫಲತೆ, ಸೋಲು ಎಂಬಂತೆ ಬಿಂಬಿಸಲಾಗುತ್ತದೆ. ಆದರೆ ನಿಜವಾದ ಸಂಪತ್ತು ಮತ್ತು ಯಶಸ್ಸಿಗೆ ಅತ್ಯಂತ ಅವಶ್ಯಕವಾಗಿರುವುದು ತಾಳ್ಮೆಯೇ ಎಂಬುದನ್ನು ಮರೆಯಬೇಡ. ರೋಮ್ ಸಾಮ್ರಾಜ್ಯವು ಒಂದು ದಿನದಲ್ಲಿ ಕಟ್ಟಲ್ಪಟ್ಟಿಲ್ಲ ಎಂಬ ಮಾತು ಗೊತ್ತಿದೆಯಲ್ಲವೇ? ಎಲ್ಲರೂ ಬದುಕಿನ ನಾಗಾಲೋಟದಲ್ಲಿ ಓಡುತ್ತಿದ್ದಾರೆ ಎಂದು ನೀನು ಓಡಬೇಡ. ನಿನಗೂ ಓಡಬೇಕೆಂಬ ಆಕಾಂಕ್ಷೆ ಬಲವಾಗಿದ್ದರೆ ಮಾತ್ರ ನಿನ್ನ ಓಟವನ್ನು ಮುಂದುವರೆಸು.

ಇದೇನಪ್ಪಾ ಅಜ್ಜನ ಗೋಳು ಎಂದು ಬೇಸರ ಪಟ್ಟುಕೊಳ್ಳಬೇಡ. ನಾನು ನದಿಯಲ್ಲಿ ಸಾಕಷ್ಟು ನೀರು ಹರಿದಿರುವುದನ್ನು ನೋಡಿದ್ದೇನೆ. ನಿನ್ನಂತೆ ಬಾಲ್ಯ ಯೌವ್ವನಗಳನ್ನು ಅನುಭವಿಸಿದ್ದೇನೆ. ಬದುಕಿನಲ್ಲಿ ಎಲ್ಲವನ್ನು ಕಲಿಯಲು ನೀನೇ ತಪ್ಪು ಮಾಡಬೇಕೆಂದಿಲ್ಲ. ಬೇರೆಯವರು ಮಾಡುವ ತಪ್ಪುಗಳಿಂದ ಪಾಠ ಕಲಿತು ಬದುಕಿನ ಸುಧಾರಣೆಗೆ ಒತ್ತು ಕೊಡಬೇಕಾಗಿರುವ ಕಾಲವಿದು. ನನ್ನ ಬುದ್ಧಿ ಮಾತುಗಳು ನಿನಗೆ ಅಪಥ್ಯವೆನಿಸಿದರೂ ಮುಂದೆ ಈ ಮಾತುಗಳ ಹಿಂದಿರುವ ಮರ್ಮದ ಅರಿವು ನಿನಗಾಗುತ್ತದೆ. ಬದುಕಿನ ಕವಲು ದಾರಿಯಲ್ಲಿ ನಡೆಯುತ್ತಿರುವ ನಿನಗೆ ಸದಾ ಒಳ್ಳೆಯದನ್ನೇ ಬಯಸುವ...ನಿನ್ನ ಪ್ರೀತಿಯ ಅಜ್ಜ.

**– ವೀಣಾ ಹೇಮಂತ್ ಗೌಡ ಪಾಟೀಲ್.**
ಮುಂಡರಗಿ, ಗದಗ.

## ಪಟ್ಟಣದ ದೇವಿ ದೇವಸ್ಥಾನಗಳಲ್ಲಿ ನವರಾತ್ರಿ ಅಂಗವಾಗಿ ಮಂಗಳವಾರ ವಿಶೇಷ ಪೂಜೆ ಮತ್ತು ಅಲಂಕಾರಗಳಿಂದ ಶೋಭಿತವಾದ ದೇವಿ ಮೂರ್ತಿಗಳ ಚಿತ್ರವೈಭವ.




ಅಡರಕಟ್ಟಿ ಗ್ರಾಮದ ದ್ಯಾಮವ್ವ ದೇವಿ ಮೂರ್ತಿ.



ಲಕ್ಷ್ಮೇಶ್ವರದ ಕೆಂಚಲಾಪುರ ಓಣಿಯ ಬನಶಂಕರಿ ದೇವಸ್ಥಾನದಲ್ಲಿ ಪೂಜಿತ ಶ್ರೀ ಬನಶಂಕರಿ ದೇವಿ ಮೂರ್ತಿ.



ಲಕ್ಷ್ಮೇಶ್ವರ ಹಳ್ಳದಕೇರಿ ಓಣಿಯ ದೊಡ್ಡ ದ್ಯಾಮವ್ವದೇವಿ ದೇವಸ್ಥಾನದಲ್ಲಿ ಅಲಂಕೃತ ದೇವಿ ಮೂರ್ತಿ.




ಲಕ್ಷ್ಮೇಶ್ವರ ಶ್ರೀ ಅಂಬಾಭವಾನಿದೇವಿ ದೇವಸ್ಥಾನದ ಅಲಂಕಾರ ಶೋಭಿತ ದೇವಿ ಮೂರ್ತಿ



ಲಕ್ಷ್ಮೇಶ್ವರದ ಕೋಡಿಯಲ್ಲಮ್ಮ ದೇವಿಯರಿಗೆ ವಿಶೇಷ ಪೂಜೆ, ಅಲಂಕಾರ ಮಾಡಿರುವುದು.



ಮಾಗಡಿ ಗ್ರಾಮದ ಉಡಚಮ್ಮ ದೇವಿ ಅಲಂಕೃತ ಮೂರ್ತಿ.



ಲಕ್ಷ್ಮೇಶ್ವರದ ಸಮೀಪದ ಕನಕಾಪುರ ದ್ಯಾಮಮ್ಮದೇವಿ ಮೂರ್ತಿ.

# ದಸರಾ ನಿಮಿತ್ತ ದಾಂಡಿಯಾ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದಲ್ಲಿ ದಸರಾ ಹಬ್ಬದ ನಿಮಿತ್ತ ವಿದ್ಯಾರ್ಥಿಗಳಿಗೆ ದಾಂಡಿಯಾ 2ಏ24 ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್.ಎಂ. ಕುಡತರಕರ ವಹಿಸಿದ್ದರು. ಪ್ರಾಚಾರ್ಯ ಬಿ.ಎಸ್. ಹಿರೇಮಠ ಪ್ರಾಸ್ತವಿಕವಾಗಿ ಮಾತನಾಡಿ, ನಾಡ ಹಬ್ಬ ದಸರಾದ ವಾತಾವರಣವನ್ನು ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದು, ವಿದ್ಯಾರ್ಥಿಗಳ ಉತ್ಸಾಹ ದ್ವಿಗುಣಗೊಳಿಸಿದೆ. ಎಲ್ಲ ವಿದ್ಯಾರ್ಥಿಗಳು ಸಕ್ರಿಯವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ ಎಂದರು.



ಸಂಸ್ಥೆಯ ಆಡಳಿತಾಧಿಕಾರಿ ಕಿಶೋರ ಮುದಗಲ್ಲ ಮಾತನಾಡಿ, ಇಂದಿನ ಕಾರ್ಯಕ್ರಮ ಸ್ಮರಣೀಯವಾಗಿದೆ ಎಂದರಲ್ಲದೆ, ದಸರಾ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರುಗಳಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಂಯೋಜಕರಾದ ಪ್ರೊ. ಸವಿತಾ ಪೂಜಾರ, ಪ್ರೊ. ಅಲ್ವಿನಾ ಡಿ, ಪ್ರೊ. ಚೈತ್ರಾ ಡಿ, ಪ್ರೊ. ಶಾಹಿದಾ ಶಿರಹಟ್ಟಿ, ಪ್ರೊ. ಸಂಗಮೇಶ ಹಾದಿಮನಿ, ಪ್ರೊ. ಆರತಿ ಗೌಡರ, ಪ್ರೊ. ಕುಸುಮ, ದೈಹಿಕ ನಿರ್ದೇಶಕರಾದ ಖಯೂಮ ನವಲೂರ, ಹರೀಶ ಬಾರಕೇರ, ಉಮಾ ದಿನ್ನಿ, ಕುಶಾಲ, ವಿಜಯಲಕ್ಷ್ಮೀ ಸಾಹುಕಾರ ಸೇರಿದಂತೆ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕವನ

# ನವರಾತ್ರಿ



ಮೈಸೂರ ದಸರಾ
ಎಷ್ಟೊಂದು ಸುಂದರ
ನವರಾತ್ರಿ ಉತ್ಸವ
ಹಬ್ಬದ ಸಡಗರ
ಎಲ್ಲೆಲ್ಲೂ ಸಂಭ್ರಮ
ನವ ಅವಾತರಗಳು
ಶೈಲಪುತ್ರಿ ದುರ್ಗೆ
ಬ್ರಹ್ಮಚಾರಿಣಿ ದುರ್ಗೆ
ಚಂದ್ರಘಂಟಾ ದುರ್ಗೆ
ಕೂಷ್ಮಾಂಡದೇವಿ ದುರ್ಗೆ
ಸ್ಕಂದ ಮಾತಾ ದುರ್ಗೆ
ಕಾತ್ಯಾಯಿನಿ ದುರ್ಗೆ
ಕಾಳರಾತ್ರಿ ಮಹಾಮಾಯೇ
ಮಹಾ ಗೌರಿ ತಾಯಿ
ಸಿದ್ಧಿಧಾತ್ರಿ ತಾಯಿ
ದೇವಿಯ ಅವತಾರಗಳು
ನವರಾತ್ರಿಯ ದಿನಗಳು
ಆಯುಧ ಪೂಜೆಗಳು
ವಿಜಯದಶಮಿ ಹಬ್ಬದ ಶುಭಾಶಯಗಳು.

**– ವಿ.ಎಂ.ಎಸ್. ಗೋಪಿ.**
ಲೇಖಕರು, ಬೆಂಗಳೂರು.

### ಪುರಸಭೆ ಸಾಮಾನ್ಯ ಸಭೆಯಲ್ಲಿ 25 ವಿಷಯಗಳ ಮೇಲೆ ಚರ್ಚೆ

# ಆಡಳಿತಾರೂಢ ಸದಸ್ಯರಿಂದಲೇ ಅಪಸ್ವರ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಅಭಿವೃದ್ಧಿ ಕಾಮಗಾರಿಗಳ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದ್ದು, ಟೆಂಡರ್ ರದ್ದುಪಡಿಸುವಂತೆ ಆಡಳಿತಾರೂಢ ಪಕ್ಷದ ಕೆಲ ಸದಸ್ಯರೇ ಅಪಸ್ವರವೆತ್ತಿದ ಪ್ರಸಂಗ ಮಂಗಳವಾರ ಪುರಸಭೆ ಸಾಮಾನ್ಯ ಸಭೆಯಲ್ಲಿ ನಡೆಯಿತು.

ಪುರಸಭೆ ಅಧ್ಯಕ್ಷೆ ಯಲ್ಲವ್ವ ದುರಗಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಒಟ್ಟು 25 ವಿಷಯಗಳ ಮೇಲೆ ಚರ್ಚೆ ನಡೆಯಿತು. ಈ ವೇಳೆ 10 ಮತ್ತು 11ನೇ ವಿಷಯದಲ್ಲಿ ಪಟ್ಟಣದಲ್ಲಿನ ಕೆಲವು ವಾರ್ಡ್‌ಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಮಂಜೂರಾತಿ ಕೊಡುವ ಬಗ್ಗೆ ವಿಷಯ ಮಂಡನೆಯಾಗುತ್ತಿದ್ದಂತೆಯೇ ಅಸಮಾಧಾನಗೊಂಡ ಸದಸ್ಯರಾದ ರಾಮು ಗಡದವರ, ಎಸ್.ಕೆ. ಹವಾಲ್ದಾರ ಮತ್ತಿತರರು ಕಾಮಗಾರಿ ಹಂಚಿಕೆಯಲ್ಲಿ ನಮ್ಮ ವಾರ್ಡಿಗೆ ಅನ್ಯಾಯವಾಗಿದೆ. ನಮ್ಮ ವಾರ್ಡಿನ ಜನರು ನೀವೇನು ಅಭಿವೃದ್ಧಿ ಕೆಲಸ ಮಾಡಿದ್ದೀರಿ ಎಂದು ಕೇಳುವ ಪ್ರಶ್ನೆಗೆ ಉತ್ತರಿಸಬೇಕು. ಅನುದಾನ ಸಮನಾಗಿ ಹಂಚಿಕೆಯಾಗಬೇಕು. ಆದ್ದರಿಂದ ಟೆಂಡರ್ ಅನುಮೋದನೆ ಮಾಡದೇ ರದ್ದುಪಡಿಸಿ ಎಂದು ಪಟ್ಟು ಹಿಡಿದರು. ಈ ವೇಳೆ ಹಿರಿಯ ಸದಸ್ಯ ಕುಂಬಿ ಮತ್ತು ಮುಖ್ಯಾಧಿಕಾರಿಗಳು ಎಷ್ಟೇ ಸಮಜಾಯಿಷಿ ನೀಡಿದರೂ ಒಪ್ಪದ್ದರಿಂದ ಅನುಮೋದನೆಗೆ ತಡೆ ನೀಡಲಾಯಿತು.



ಮಳೆಗಾಲವಾದರೂ ತಿಂಗಳಿಗೊಮ್ಮೆ ನೀರು ಬಾರದ್ದರಿಂದ ಸಾರ್ವಜನಿಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲ. ಕಾರಣ ಹೇಳಿ ಸಾಕಾಗಿದೆ. ಇನ್ನಾದರೂ ನೀರಿನ ವಿಷಯದಲ್ಲಿ ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಮಾಜಿ ಅಧ್ಯಕ್ಷೆ ಪೂರ್ಣಿಮಾ ಪಾಟೀಲರ ಹೇಳಿಕೆಗೆ ಸದಸ್ಯರು ದನಿಗೂಡಿದರು. ಈ ವೇಳೆ 15ನೇ ಹಣಕಾಸು ನಿರ್ಬಂಧಿತ ಅನುದಾನ 15 ಲಕ್ಷ 41 ಸಾವಿರ ಎಸ್‌ಎಫ್‌ಸಿ ಅನುದಾನದಲ್ಲಿ ಉಳಿಕೆಯಾದ 7 ಲಕ್ಷ 61 ಸಾವಿರ ಹಣವನ್ನು ನೀರಿನ ಸಮಸ್ಯೆ ನೀಗಿಸಲು ತುಂಗಭದ್ರಾ ನದಿಯಿಂದ ಮೇವುಂಡಿ ಜಾಕ್‌ವೆಲ್ ಹಾಗೂ ಸೂರಣಗಿ ನೀರು ಶುದ್ಧೀಕರಣ ಘಟಕದಲ್ಲಿನ ಯಂತ್ರೋಪಕರಣಗಳು, ಪೈಪ್‌ಲೈನ್ ದುರಸ್ಥಿಗೆ ಬಳಸಲು ಸರ್ವಾನುಮತದ ಒಪ್ಪಿಗೆ ಸೂಚಿಸಿದರು.


ಸಭೆಯಲ್ಲಿ ಹಾಜರಿದ್ದ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಶ್ರೀಕಾಂತ ಕಾಟೇವಾಲೆ ಅವರಿಂದ ಮಾಹಿತಿ ಪಡೆದ ಸದಸ್ಯರು, ತಾಲೂಕಾ ಕೇಂದ್ರವಾದ ಪಟ್ಟಣದಲ್ಲಿ ಕೇವಲ 30 ಬೆಡ್‌ನ ಸರ್ಕಾರಿ ಆಸ್ಪತ್ರೆಯಿದ್ದು, ನಿತ್ಯ ಬರುವ ನೂರಾರು ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ಲಭಿಸುತ್ತಿಲ್ಲ. ಕಾರಣ ಸರ್ವ ಸದಸ್ಯರು ಪಟ್ಟಣದಲ್ಲಿ 100 ಬೆಡ್ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರವನ್ನು ಒತ್ತಾಯಿಸೋಣ ಎಂಬ ನಿರ್ಧಾರ ಕೈಗೊಂಡರು.

ಖಾಲಿ ಇರುವ ಪೌರ ಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಿಸುವ ವಿಷಯ ಪ್ರಸ್ತಾಪದ ವೇಳೆ ಸದಸ್ಯ ರಾಜೀವ ಕುಂಬಿ, ಪ್ರವೀಣ ಬಾಳಿಕಾಯಿ, ವಿಜಯ ಕರಡಿ, ಜಯಮ್ಮ ಅಂದಲಗಿ ಮತ್ತಿತರರು ಮುಖ್ಯಾಧಿಕಾರಿ ಮಹೇಶ ಎಂ.ಎಚ್ ಮತ್ತು ಆರೋಗ್ಯ ನಿರೀಕ್ಷಕ ಮಂಜುನಾಥ ಮುದಗಲ್ ವಿರುದ್ಧ ಹರಿಹಾಯ್ದರು. ಪಟ್ಟಣದಲ್ಲಿ ಸ್ವಚ್ಛತೆ, ತ್ಯಾಜ್ಯ ವಿಲೇವಾರಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಇದರಲ್ಲಿ ಅಧಿಕಾರಿಗಳ ನಿರ್ಲಕ್ಷ ಎದ್ದು ಕಾಣುತ್ತಿದೆ. ಸಾರ್ವಜನಿಕರು ಸದಸ್ಯರಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಕೇವಲ ಪೌರ ಕಾರ್ಮಿಕರ ಕೊರತೆಯ ಸಮಸ್ಯೆ ಹೇಳದೇ ಅಧಿಕಾರಿಗಳಾದ ನೀವು ನಿತ್ಯವೂ ವಾರ್ಡ್‌ನ ವೀಕ್ಷಣೆ, ಪೌರಕಾರ್ಮಿಕರ ಮೇಲೆ ಮೇಲ್ವಿಚಾರಣೆ ಮಾಡಬೇಕು. ಆದಷ್ಟು ಬೇಗ ಜಿಲ್ಲಾಧಿಕಾರಿಗಳು ಮತ್ತು ಸರ್ಕಾರದ ಹಿರಿಯ ಅಧಿಕಾರಿಗಳ, ಜನಪ್ರತಿನಿಧಿಗಳ ಗಮನ ಸೆಳೆದು ಪೌರ ಕಾರ್ಮಿಕರನ್ನು ನಿಯೋಜಿಸುವ ಕೆಲಸವಾಗಬೇಕು ಎಂದರು.

ಪಟ್ಟಣದಲ್ಲಿನ ಇಟ್ಟಿಕೆರೆ ಅಭಿವೃದ್ಧಿಗೆ ಪುರಸಭೆಯಲ್ಲಿನ 56 ಲಕ್ಷ ರೂ ಕೆರೆ ಸಂರಕ್ಷಣಾ ನಿಧಿಯನ್ನು ಆರ್‌ಡಿಪಿಆರ್ ಇಲಾಖೆಗೆ ಹಸ್ತಾಂತರಿಸಿ ಕೆರೆ ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಾಧಿಕಾರಿ ಮಹೇಶ ಹಡಪದ ತಿಳಿಸಿದರು.

ಸಭೆಯಲ್ಲಿ ಅಂಗನವಾಡಿ ಕಟ್ಟಡಗಳಿಗೆ ನಿವೇಶನ ಕಲ್ಪಿಸುವುದು, ದ್ವಾರ ಬಾಗಿಲ ನಿರ್ಮಾಣ, ಶಿಗ್ಲಿ ನಾಕಾದಲ್ಲಿ ಮಳಿಗೆ ಮರು ಟೆಂಡರ್, ಮುಕ್ತಿವಾಹಿಸಿ ವಾಹನ ಖರೀದಿ ಸೇರಿದಂತೆ ಹಲವು ವಿಷಯಗಳು ಚರ್ಚೆಯಾಗಿ ಅನುಮೋದನೆ ಗೊಳಪಟ್ಟವು. ಪುರಸಭೆ ಉಪಾಧ್ಯಕ್ಷ ಫಿರ್ದೋಸ್ ಆಡೂರ ಸೇರಿ ಸದಸ್ಯರು, ಶಿಕ್ಷಣ, ಆರೋಗ್ಯ ಮತ್ತು ಪಶು ಇಲಾಖೆಯ ಅಧಿಕಾರಿಗಳು, ಪುರಸಬೆ ಸಿಬ್ಬಂದಿಗಳು ಪಾಲ್ಗೊಂಡಿದ್ದರು.


### ಬಿಸಿಎ 6ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಪೂಜಾ ಮುಳ್ಳಾಳ ಶೇ.97.05 ಅಂಕ ಪಡೆದು ಪ್ರಥಮ, ತಬಸುಮ ಕವಲೂರ ಶೇ.97.00 ಅಂಕ ಪಡೆದು ದ್ವಿತೀಯ, ವೈಷ್ಣವಿ ಮುಂಡರಗಿ ಶೇ.96.05 ಅಂಕ ಪಡೆದು ತೃತೀಯ ಸ್ಥಾನ, ರಚೆಲ ರಿಯಾ ಶೇ. 96.03 ಅಂಕ ಪಡೆದು 4ನೇ ಸ್ಥಾನ, ಪಲ್ಲವಿ ಕೋಳಿವಾಡ ಶೇ.90 ಅಂಕ ಪಡೆದು 5ನೇ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಕುಡತರಕರ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಸಂಜಯ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಶ್ಲಾಘಿಸಿದ್ದಾರೆ.



ನಾಡಹಬ್ಬ ದಸರಾ ನಿಮಿತ್ತ ಮಹಿಷಿಯನ್ನು ಸಂಹಾರ ಮಾಡಿದ ಚಾಮುಂಡಿಯಾಗಿ ನಾಡಿನ ಆರಾಧ್ಯ ದೇವಿಯ ಪಾತ್ರ ನಿರ್ವಹಿಸಿದ ಪುಟಾಣಿ ಧಾನವಿ ಪ್ರದೀಪ್ ಗೋಡಿಯವರ ಸಂಭ್ರಮಿಸಿದ್ದು ಹೀಗೆ...

# ತೋಂ. ಸಿದ್ಧಲಿಂಗ ಶ್ರೀಗಳ ಪುಣ್ಯಸ್ಮರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಬಸವ ಕೇಂದ್ರ ಹಾಗೂ ಜಾಗತಿಕ ಲಿಂಗಾಯತ ಮಹಾಸಭೆಯ ಸಂಯುಕ್ತ ಆಶ್ರಯದಲ್ಲಿ ಲಿಂಗೈಕ್ಯ ಪೂಜ್ಯ ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ 6ನೇ ಪುಣ್ಯಸ್ಮರಣೋತ್ಸವ ಹಾಗೂ ಸಾಹಿತಿಗಳಾದ ಎ.ಆರ್. ಪಂಪಣ್ಣ ಇವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಎಸ್. ಚಟ್ಟಿ ವಹಿಸಿದ್ದರು. ಉಪನ್ಯಾಸವನ್ನು ನೀಡಿದ ಬಸವ ಕೇಂದ್ರದ ಸಂಚಾಲಕ ಕಿರಣ ತಿಪ್ಪಣ್ಣವರ ಪೂಜ್ಯ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಜೀವನ ದರ್ಶನವನ್ನು ತಿಳಿಸಿದರು. ಪ್ರಸಾದ ಸೇವೆಯನ್ನು ಬಸವ ಕೇಂದ್ರದ ಶರಣರಾದ ಮಂಜುನಾಥ ಅಡಿವಪ್ಪ ಮಲ್ಲಾಪುರ್ ವಹಿಸಿಕೊಂಡಿದ್ದರು. ಸುರೇಶ್ ನಿಲುಗಲ್ಲ ಸ್ವಾಗತಿಸಿದರು. ಶರಣೆ ಮಂಜುಳಾ ಹಾಸಿಲ್ಕರ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ಶರಣು ಸಮರ್ಪಣೆಯನ್ನು ದೀಪಾ ನಿಲುಗಲ್ ನಡೆಸಿಕೊಟ್ಟರು.

ವಚನ ಸಂಗೀತವನ್ನು ಕುಮಾರಸ್ವಾಮಿ ಹಿರೇಮಠ ಹಾಗೂ ಎಚ್.ಬಿ. ತೋಟದ ನಡೆಸಿಕೊಟ್ಟರು. ಹಗರಿಬೊಮ್ಮನಹಳ್ಳಿ ತಾಲೂಕಿನ ಹಿರಿಯರು, ಬಸವ ಕೇಂದ್ರ ಜಾಗತಿಕ ಲಿಂಗಾಯತ ಮಹಾಸಭೆಯ ಸರ್ವ ಸದಸ್ಯರು, ಒಕ್ಕಲಿಗೇರಿಯ ಓಣಿಯ ಗುರು-ಹಿರಿಯರು ಪಾಲ್ಗೊಂಡಿದ್ದರು.

### 5ನೇ ದಿನದ ಇಷ್ಟಲಿಂಗ ಮಹಾ ಪೂಜೆಯಲ್ಲಿ ರಂಭಾಪುರಿ ಜಗದ್ಗುರುಗಳ ಆಶೀರ್ವಚನ

# ಜಗತ್ತಿನಲ್ಲಿ ಗೆಳೆತನಕ್ಕೆ ಪ್ರಾಮುಖ್ಯತೆಯಿದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನುಷ್ಯ ಧರ್ಮದಿಂದ ಬಾಳುವುದನ್ನು ಕಲಿಯಬೇಕು. ಧರ್ಮಾಚರಣೆಯು ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿಯನ್ನು ನೀಡುತ್ತದೆ ಎಂದು ಶ್ರೀಮದ್ ರಂಭಾಪುರಿ ಜಗದ್ಗುರುಗಳು ಹೇಳಿದರು.



ಅಬ್ಬಿಗೇರಿಯ ಹೊಸ ಹಿರೇಮಠದ ಸಭಾಂಗಣದಲ್ಲಿ 5ನೇ ದಿನದ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ಧರ್ಮವೆಂದರೆ ಬಹಳ ದೊಡ್ಡದೇನಲ್ಲ. ಯಾರ ಮನಸ್ಸನ್ನೂ ನೋಯಿಸದಿರುವುದು ಧರ್ಮ, ಇನ್ನೊಬ್ಬರ ವಸ್ತುವನ್ನು ಕಣ್ಣೆತ್ತಿ ನೋಡದಿರುವುದು ಧರ್ಮ, ಮತ್ತೊಬ್ಬರ ಮನಸ್ಸಿಗೆ ನೋವುಂಟು ಮಾಡದಿರುವುದು ಧರ್ಮ. ಇದನ್ನು ಮಾನ ಧರ್ಮ ಎನ್ನುತ್ತೇವೆ. ಈ ಮಾನವ ಧರ್ಮವನ್ನು ನಮ್ಮಲ್ಲಿ ಅಳವಡಿಸಿಕೊಂಡರೆ ನಾವು ಮನುಷ್ಯರಾಗುತ್ತೇವೆ. ಇಲ್ಲವಾದರೆ ರಾಕ್ಷಸರಾಗುತ್ತೇವೆ. ಮಾನವ ಆಗುವುದು, ದಾನವ ಆಗುವುದು ಎರಡೂ ನಮ್ಮ ಕೈಯಲ್ಲಿಯೆ ಇವೆ ಎಂದು ಜಗದ್ಗುರುಗಳು ತಿಳಿಸಿದರು.

ಜಗತ್ತಿನಲ್ಲಿ ಗೆಳೆತನಕ್ಕೆ ಬಹಳ ಮಹತ್ವವಿದೆ. ನಮ್ಮ ಗೆಳೆತನ ಹೇಗಿರಬೇಕೆಂದರೆ, ಕೃಷ್ಣ-ಸುಧಾಮನ ಗೆಳೆತನದಂತೆ ಇರಬೇಕು. ತನ್ನ ಗೆಳೆಯ ತೊಂದರೆಯಲ್ಲಿದ್ದಾನೆ, ಅವನಿಗೆ ಶ್ರೀಕ್ಷಯ ಆಗಿದೆ ಎಂದು ಗೊತ್ತಾದ ತಕ್ಷಣ ಕೃಷ್ಣ ಸುಧಾಮನನ್ನು ಕೃಪಾ ದೃಷ್ಟಿಯಿಂದ ನೋಡಿದ. ಭಗವಂತನ ದೃಷ್ಟಿ ಬಿದ್ದ ಮೇಲೆ ಶ್ರೀಕ್ಷಯನಾಗಿದ್ದ ಸುಧಾಮ ಶ್ರೀಮಂತನಾದ. ಭಗವಂತನ ದೃಷ್ಟಿಗೆ ಬೀಳಲು ಎಲ್ಲರೂ ತವಕಿಸಬೇಕು. ಅಂದಾಗ ಜೀವನಕ್ಕೊಂದು ಅರ್ಥ ಬರುತ್ತದೆ ಎಂದು ಹೇಳಿದ ಜಗದ್ಗುರುಗಳು, ಇತ್ತೀಚಿನ ದಿನಗಳಲ್ಲಿ ಸ್ನೇಹಕ್ಕೆ ಯಾವುದೇ ಅರ್ಥವಿಲ್ಲವೆಂದು ವಿಷಾದಿಸಿದರು.

ಮಕ್ಕಳು ಚಿಕ್ಕವರಿರುವಾಗಲೇ ಅವರಲ್ಲಿ ಆದರ್ಶದ ಗುಣಗಳನ್ನು ಬಿತ್ತಲು ಪ್ರಯತ್ನಿಸಿ. ಇಲ್ಲವಾದರೆ ನಾಳೆಗೆ ನಿಮ್ಮ ಮಕ್ಕಳು ನಿಮಗೇ ವೈರಿಯಾದಾರು. ಅವರಲ್ಲಿ ಸಮಾಧಾನದ ಗುಣ, ಸಂಸ್ಕಾರ, ಸಂಸ್ಕೃತಿಗಳನ್ನು ಈಗಿನಿಂದಲೇ ಕಲಿಸಿದರೆ ಮುಂದೆ ಅವರು ಈ ದೇಶಕ್ಕೆ ದೊಡ್ಡ ಆಸ್ತಿಯಾಗುತ್ತಾರೆ ಎಂದು ಶ್ರೀಗಳು ಕಿವಿಮಾತು ಹೇಳಿದರು.

ಈ ಭಾಗದಲ್ಲಿ ರೈತಾಪಿ ವರ್ಗದ ಜನರೇ ಹೆಚ್ಚಾಗಿದ್ದಾರೆ. ಆದ್ದರಿಂದ ಅವರಲ್ಲಿ ತಿಳಿಸುವುದೇನೆಂದರೆ, ಸಾವಯವ ಕೃಷಿಯ ಕಡೆಗೆ ಹೆಚ್ಚಿನ ಗಮನ ನೀಡಿ. ಇದರಿಂದ ರೋಗ ನಿರೋಧಕ ಬೆಳೆಗಳನ್ನು ಬೆಳೆಯಲು ಸಹಾಯಕವಾಗುತ್ತದೆ. ಅದಕ್ಕೆಂದೇ ಧರ್ಮ ಸಮ್ಮೇಳನದಲ್ಲಿ ಸಾವಯವ ಕೃಷಿಯ ಬಗ್ಗೆ ಒಂದು ವಿಶೇಷ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ ಎಂದು ಶ್ರೀಗಳು ತಿಳಿಸಿದರು.

ನಾಡಿನ ಅನೇಕ ಹರ-ಗುರು-ಚರಮೂರ್ತಿಗಳು ಇಷ್ಟಲಿಂಗ ಮಹಾಪೂಜೆಯಲ್ಲಿ ಪಾಲ್ಗೊಂಡಿದ್ದರು. ಮಹಾ ಪೂಜೆಗೆ ಕೋಟುಮಚಗಿ, ನಾರಾಯಣಪೂರ, ಕಣಗಿನಹಾಳ ಹಾಗೂ ಅಬ್ಬಿಗೇರಿ ಗ್ರಾಮದ 2ನೇ ವಾರ್ಡ್‌ನ ಮಹಿಳೆಯರು ಕುಂಭಗಳೊಂದಿಗೆ ಪೂಜೆಯಲ್ಲಿ ಪಾಲ್ಗೊಂಡಿದ್ದರು.

### ಯೋಗ ಶಿಕ್ಷಕರ ತರಬೇತಿ ಶಿಬಿರದ ಅಭಿನಂದನಾ ಕಾರ್ಯಕ್ರಮದಲ್ಲಿ ಭವರಲಾಲ ಆರ್ಯ

# ಸರಳ ಯೋಗವನ್ನು ಮರೆಯಬಾರದು

■ವಿಜಯಸಾಕ್ಷಿ ಸುದ್ದಿ, ಗದಗ

ಯೋಗದಲ್ಲಿ ಪ್ರತಿ ದಿನ ಅಧ್ಯಯನ, ಅಭ್ಯಾಸ, ಆಚರಣೆ ನಿಮ್ಮೆಲ್ಲರ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು. ಪ್ರತಿ ದಿನ 1 ಗಂಟೆ ಯೋಗದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಮತ್ತೊಬ್ಬರ ಆನಂದದಲ್ಲಿ ನಮ್ಮ ಆನಂದವನ್ನು ಕಂಡುಕೊಳ್ಳಬೇಕು. ಸರಳ ಯೋಗವನ್ನು ಮರೆಯಬಾರದು ಎಂದು ಅಂತಾರಾಷ್ಟ್ರೀಯ ಯೋಗ ಗುರು, ಕರ್ನಾಟಕ ರಾಜ್ಯ ಪ್ರಭಾರಿಗಳು ಹಾಗೂ ವರಿಷ್ಠರಾದ ಭವರಲಾಲ ಆರ್ಯ ಯೋಗ ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.



ಪತಂಜಲಿ ಯೋಗ ಪೀಠ ಹರಿದ್ವಾರ ಆಶ್ರಯದಲ್ಲಿ ಗದಗ ಜಿಲ್ಲಾ ಪತಂಜಲಿ ಯೋಗ ಸಮಿತಿ, ಮಹಿಳಾ ಪತಂಜಲಿ ಯೋಗ ಸಮಿತಿ, ಭಾರತ ಸ್ವಾಭಿಮಾನ ಟ್ರಸ್ಟ್, ಕಿಸಾನ ಪಂಚಾಯತ, ಯುವ ಭಾರತ ಸಂಘಟನೆಗಳ ಆಶ್ರಯದಲ್ಲಿ ಹುಲಕೋಟಿ ಪ್ರಕೃತಿ ಚಿಕಿತ್ಸಾ ಹಾಗೂ ಯೋಗ ವಿಜ್ಞಾನ ಸಂಸ್ಥೆಯಲ್ಲಿ 17 ದಿನಗಳ ಕಾಲ ಹಮ್ಮಿಕೊಂಡಿದ್ದ ಯೋಗ ಶಿಕ್ಷಕರ ತರಬೇತಿ ಶಿಬಿರದ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಗದಗ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ, ರಾಜ್ಯ ಸಮಿತಿ ಸದಸ್ಯರಾದ ಡಾ. ಎಸ್.ಬಿ. ಹಂದ್ರಾಳ ಮಾತನಾಡಿ, ನಮ್ಮ ಸಾಧನೆಯಿಂದಲೇ ಸದ್ದಾಗಬೇಕು. ನಾನು ನನ್ನಿಂದಲೇ ಎಂಬುದನ್ನು ಬಿಟ್ಟು ಯೋಗದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸೇವೆ ಸಾರ್ಥಕವಾಗುತ್ತದೆ. ಯೋಗವನ್ನು ಜೀವನ ಪದ್ಧತಿಯನ್ನಾಗಿಸಿಕೊಳ್ಳಬೇಕೆಂದು ನುಡಿದರು.

ಹುಲಕೋಟಿ ಪ್ರಕೃತಿ ಚಿಕಿತ್ಸಾ ಕೇಂದ್ರ ವೈದ್ಯಾಧಿಕಾರಿ ಡಾ. ಸತೀಶ ಹೊಂಬಾಳಿ ಮಾತನಾಡಿ, ಪಂಚಭೂತಗಳಿಂದಾಗ ನಮ್ಮ ಶರೀರಕ್ಕೆ ಪಂಚಭೂತಗಳಿಂದಲೇ ಚಿಕಿತ್ಸೆ ಆಗಬೇಕು. ಪ್ರಕೃತಿಯೊಂದಿಗೆ ಬದುಕುವುದನ್ನು ಕಡಿಮೆ ಮಾಡಿದ್ದರಿಂದಲೇ ದೀರ್ಘಕಾಲದ ರೋಗಕ್ಕೆ ತುತ್ತಾಗುತ್ತಿದ್ದೇವೆ. ಸುಂದರ ಸರಳ ಜೀವನಕ್ಕೆ ಸಾತ್ವಿಕ ಆಹಾರ ಹಾಗೂ ಕನಿಷ್ಠ 15 ದಿನಕ್ಕೊಮ್ಮೆ ಉಪವಾಸ, 1 ಗಂಟೆ ಕಡ್ಡಾಯ ಯೋಗ, ಪ್ರಾರ್ಥನೆ ಮತ್ತು ಸತ್ಸಂಗ, ಯಾವುದೇ ಚಟಗಳಿಗೆ ದಾಸರಾಗಬಾರದು, ಪ್ರತಿ ದಿನ 10ರಿಂದ 15 ಗ್ಲಾಸ್ ನೀರನ್ನು ಕುಡಿಯಬೇಕು. ಈ 5 ಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸಿದಲ್ಲಿ ಜೀವನ ಸುಂದರವಾಗಿರುತ್ತದೆ ಎಂದು ಸಲಹೆ ನೀಡಿದರು.

[illegible] ಶಿವಲಿಂಗ ಡೋಳಿ ಹಾಗೂ ರವಿ ಬೊಳಿಕಟ್ಟಿ ವಿಶೇಷ ಅತಿಥಿಗಳಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಪ್ರಸಾದ ಸೇವೆಯನ್ನು ಮಾಡಿಸಿದ ಕುರ್ತಕೋಟಿ ಗ್ರಾ.ಪಂ ಉಪಾಧ್ಯಕ್ಷರಾದ ಸರೋಜ ಬೂದಪ್ಪ ಅಂಗಡಿ ದಂಪತಿಗಳಿಗೆ ಭವರಲಾಲ ಆರ್ಯರು ಗೌರವ ಸಮರ್ಪಿಸಿದರು.

ಲತಾ ಮನೆ ಪ್ರಾರ್ಥಿಸಿದರು. ಅತಿಥಿಗಳ ಪರಿಚಯವನ್ನು ಜಿಲ್ಲಾ ಖಜಾಂಚಿ ಕೆ.ಎಸ್. ಗುಗ್ಗರಿ ಮಾಡಿದರು. ರವಿ ಹಾಗೂ ಶೋಭಾ ಇವರಿಂದ ಪುಷ್ಪಾರ್ಪಣೆ ಜರುಗಿತು. ಮಹಾಂತೇಶಗೌಡ ಹೆರೂರ ಹಾಗೂ ಯಾದಗಿರಿ, ರಾಯಚೂರದಿಂದ ಆನ್ಲೈನ್ ಮೂಲಕ ಶಿಬಿರದಲ್ಲಿ ಭಾಗಿಯಾದ ಶಿಬಿರಾರ್ಥಿಗಳನ್ನು ಗೌರವಿಸಲಾಯಿತು.

ಮಹಿಳಾ ಪ್ರಭಾರಿಗಳಾದ ಶೋಭಾ ಗುಗ್ಗರಿ ಹಾಗೂ ಆಂಜನೇಶ ಮಾನೆ ಶಿಬಿರದ ಕುರಿತು ಸಾಂದರ್ಭಿಕವಾಗಿ ಮಾತನಾಡಿದರು.

ಗದಗದಲ್ಲಿ ಪತಂಜಲಿಯನ್ನು ಹುಟ್ಟು ಹಾಕಲು ಕಾರಣೀಭೂತರಾದ ಸುನಂದಾ ಭೂಮರಡ್ಡಿಯವರನ್ನುಗೌರವಿಸಲಾಯಿತು. ಸಹಪ್ರಭಾರಿ ಆಂಜನೇಶ ಮಾನೆಯವರು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆಗೆ ಸಹಕರಿಸಿದರು. ರತ್ನಾ ಬಡಿಗಣ್ಣವರ ಜನಪದ ಗೀತೆ ಹಾಡಿದರು. ವೇದಿಕೆ ಮೇಲೆ ಕಿಸಾನ ಪಂಚಾಯತ ಜಿಲ್ಲಾ ಪ್ರಭಾರಿಗಳಾದ ಪ್ರಮೋದ ಬೆಲಿ ಉಪಸ್ಥಿತರಿದ್ದರು. ನಾಗರತ್ನಾ ಬಡಿಗಣ್ಣವರ ನಿರೂಪಿಸಿದರು. ಬಸಮ್ಮ ಹಡಗಲಿ ವಂದಿಸಿದರು.

# ಪ್ರತಿಭಟನಾಕಾರರ ಮೇಲಿನ ಪ್ರಕರಣ ವಾಪಸ್ ಪಡೆಯಲು ಒತ್ತಾಯ




■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕವಲೂರು ಗ್ರಾಮದ ಶ್ರೀ ಕಲ್ಪವೃಕ್ಷ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಒಕ್ಕೂಟದಿಂದ ರಸ್ತೆಗಳ ನಿರ್ಮಾಣ,ದುರಸ್ತಿಗೆ ಆಗ್ರಹಿಸಿ ಕವಲೂರು ಗ್ರಾಮ ಬಂದ್ ಮಾಡಿ ಪ್ರತಿಭಟನೆ ವೇಳೆ ಗ್ರಾಮಸ್ಥರ ಮೇಲೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದು ಕೂಡಲೇ ವಾಪಸ್ ಪಡಿಯುವಂತೆ ಕವಲೂರು ಹಾಗೂ ಗುಡಗೇರಿ ಗ್ರಾಮದ ಮಹಿಳೆಯರು ಒತ್ತಾಯಿಸಿದರು.

ನಗರದ ಕೆಯೂಡಬ್ಲ್ಯೂಜೆ ಪತ್ರಿಕಾ ಭವನದಲ್ಲಿ ಮಂಗಳವಾರ ನಡರಸ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಗ್ರಾಮದ ಕೆಲ ಪುರುಷರು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಪ್ರಕರಣ ದಾಖಲು ಮಾಡಲಾಗಿದೆ ಅಂದು ಯಾರೂ ಕಾನೂನನ್ನು ಕೈಗೆ ತೆಗೆದುಕೊಂಡಿಲ್ಲ, ಯಾವುದೇ ಹಾನಿ ಮಾಡಿರುವುದಿಲ್ಲ, ಹಾಗಿದ್ದರೆ ಸ್ಥಳದಲ್ಲಿ ಇದ್ದ ಪೊಲೀಸ್ ಅಧಿಕಾರಿಗಳು ಆ ಕ್ಷಣದಲ್ಲಿ ಬಂಧಿಸಬಹುದಾಗಿತ್ತು ಆದರೆ ಯಾರೋ ಬರೆದುಕೊಟ್ಟ ಲಿಸ್ಟನ್ನು ಪಡೆದು ವಿನಾಕಾರಣ ಕೇಸ್ ದಾಖಲು ಮಾಡಿದ್ದಾರೆ, ಅದರಲ್ಲಿ ಗ್ರಾಮದ ಮುಗ್ಧ ಜನರ ಹೆಸರು ಇದ್ದು, ಕೇಸ್ ಹಾಕಿದ್ದು ಗ್ರಾಮದ ರೈತರ ಮೇಲೆ ಈಗ ಹೊಲದಲ್ಲಿ ಕೆಲಸ ಇರುವುದರಿಂದ ಬೆಳೆಗಳು ಕೈಗೆ ಬಂದಿರುವುದರಿಂದ ಈ ಪ್ರಕರಣದಿಂದ ಭಯಗೊಂಡು ಗ್ರಾಮದ ಜನರು ಹೊಲದಲ್ಲಿ ಇರದಂತೆ ಆಗಿದೆ, ಇದರಿಂದ ಅವರ ಬದುಕು ದು:ಸ್ಥಿತಿಯಾಗಿದೆ, ಇಲ್ಲಿ ಅಮಾಯಕರ ಮೇಲೆ ಪ್ರಕರಣಗಳನ್ನು ದಾಖಲಿಸಿದ್ದು ಇದನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ಗ್ರಾಮದ ಮಹಿಳೆಯರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಮಹಿಳೆಯರಾದ ರತ್ನಮ್ಮ ಉಟಕನೂರು, ರೇಣುಕಾ ಬೆಟಗೇರಿ, ರೇಣುಕಾ ಹೂಗಾರ, ರೇಣುಕಾ ಜೋಗಿನ್, ಪ್ರಭಾವತಿ ಪೋತರೆಡ್ಡಿ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

### ಸಿಎಂ ಸಿದ್ದರಾಮಯ್ಯರಿಂದ ಧಾರವಾಡ ರಡ್ಡಿ ಬ್ಯಾಂಕಿನ ನೂತನ ಕಟ್ಟಡ ಉದ್ಘಾಟನೆ ಅ.13ಕ್ಕೆ

# ರಡ್ಡಿ ಸಹಕಾರ ಬ್ಯಾಂಕ್‌ನ ಶತಮಾನೋತ್ಸವ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದಾದ ಪ್ರತಿಷ್ಠಿತ ರಡ್ಡಿ ಸಹಕಾರ ಬ್ಯಾಂಕ್ ಅ.13 ರಂದು ಶತಮಾನೋತ್ಸವ ಆಚರಿಸಿಕೊಳ್ಳುತ್ತಿದೆ. 1914ರಲ್ಲಿ ಎಫ್.ಟಿ. ನಲವಡಿ ಹಾಗೂ ಸಮಾಜದ ಧುರೀಣರಿಂದ ಆರಂಭವಾದ ಬ್ಯಾಂಕ್ ಇಂದು ಹೆಮ್ಮರವಾಗಿ ಬೆಳೆದಿದೆ. ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲರು ಹಾಗೂ ಹಿರಿಯರು ಬ್ಯಾಂಕಿಗೆ ಬಲ ತುಂಬಿದರು. ಈಗ ಬ್ಯಾಂಕಿನ ಪ್ರೇರಕ ಶಕ್ತಿಯಾಗಿ ಬ್ಯಾಂಕಿನ ನಿರ್ದೇಶಕರು ಹಾಗೂ ಸಚಿವರಾದ ಎಚ್.ಕೆ. ಪಾಟೀಲರು ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದು ಬ್ಯಾಂಕಿನ ನಿರ್ದೇಶಕ ಕೆ.ಎಲ್. ಪಾಟೀಲ ಹಾಗೂ ಶಾಸಕ ಎನ್.ಎಚ್. ಕೋನರಡ್ಡಿ ಮಾಹಿತಿ ನೀಡಿದರು.

ಮಂಗಳವಾರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಶತಮಾನೋತ್ಸವ ಸಂಭ್ರದ ವಿವರಗಳನ್ನು ನೀಡಿ, ಅ.13ರ ಸಾಯಂಕಾಲ 4 ಗಂಟೆಗೆ ಬ್ಯಾಂಕಿನ ಪ್ರಧಾನ ಕಛೇರಿಯ ನೂತನ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ನಂತರ ಬ್ಯಾಂಕಿನ ಸಂಸ್ಥಾಪಕರಾದ ಎಫ್.ಟಿ. ನಲವಡಿ ಮತ್ತು ಬ್ಯಾಂಕಿನ ಅಭಿವೃದ್ಧಿ ಹರಿಕಾರರಾದ ಕೆ.ಎಚ್. ಪಾಟೀಲರ ಪುತ್ಥಳಿಗಳ ಅನಾವರಣ ಮಾಡುವರು.

ಸತ್ತೂರಿನ ಡಿ. ವೀರೇಂದ್ರ ಹೆಗಡೆ ಕಲಾಕ್ಷೇತ್ರದಲ್ಲಿ ನಡೆಯುವ ಶತಮಾನೋತ್ಸವ ಸಮಾರಂಭವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಉದ್ಘಾಟಿಸುವರು. ವಿ.ಪ ಸಭಾಪತಿ ಬಸವರಾಜ ಹೊರಟ್ಟಿ 'ಕೆ.ಎಚ್. ಪಾಟೀಲ ವಿಚಾರಧಾರೆ' ಪುಸ್ತಕ ಬಿಡುಗಡೆ ಮಾಡುವರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಹಾಯೋಗಿ



ವೇಮನರ ಭಾವಚಿತ್ರ ಅನಾವರಣ ಮಾಡುವರು. ಸಹಕಾರಿ ಸಚಿವ ಕೆ.ಎನ್. ರಾಜಣ್ಣ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಸಚಿವರಾದ ರಾಮಲಿಂಗಾರಡ್ಡಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಭಾವಚಿತ್ರ ಅನಾವರಣ ಮಾಡುವರು.

ಸಚಿವರಾದ ಸಂತೋಷ ಲಾಡ್, ಆರ್.ಬಿ. ತಿಮ್ಮಾಪೂರ, ಶರಣಬಸಪ್ಪ ದರ್ಶನಾಪುರ, ಹೊಸದಿಲ್ಲಿಯ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಲಕ್ಷ್ಮೀದಾಸ, ಹೊಸದಿಲ್ಲಿಯ ಅಂಬ್ರೇಲಾ ಸಂಘಟನೆಯ (ಎನ್.ಯು.ಸಿ.ಎಫ್.ಡಿ.ಸಿ.) ಚೇರಮನ್ ಜ್ಯೋತೀಂದ್ರಭಾಯಿ ಮೆಹ್ತಾ ಪಾಲ್ಗೊಳ್ಳುವರು.

ಸಂಸದರಾದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ರಮೇಶ ಜಿಗಜಿಣಗಿ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದರು.

ಶಾಸಕರಾದ ಜಿ. ಎಸ್. ಪಾಟೀಲ, ಸಿ.ಎಸ್. ನಾಡಗೌಡ, ಜೆ. ಟಿ. ಪಾಟೀಲ, ವಿನಯ ಕುಲಕರ್ಣಿ, ಪ್ರಸಾದ ಅಬ್ಬಯ್ಯ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಮಾಜಿ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ, ಮಾಜಿ ಸಚಿವ ಎ.ಎಮ್. ಹಿಂಡಸಗೇರಿ, ಮಾಜಿ ಶಾಸಕ ಡಿ.ಆರ್. ಪಾಟೀಲ, ಮಾಜಿ ಸಚಿವ ಬಿ.ಆರ್. ಯಾವಗಲ್, ಶಾಸಕರಾದ ಎನ್.ಎಚ್. ಕೋನರಡ್ಡಿ, ಮಾಜಿ ಸಚಿವ ಎಸ್.ಆರ್. ಪಾಟೀಲ, ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಸರ್ಕಾರದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಅಜಯ ನಾಗಭೂಷಣ ಹಾಗೂ ಭಾರತೀಯ ಭೂ ಸೇನೆಯ ಲೆ। ಜನರಲ್ ರಮೇಶ ಹಲಗಲಿ (ನಿ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

> ಎರೆಹೊಸಳ್ಳಿಯ ಶ್ರೀ ವೇಮನಾನಂದ ಮಹಾಸ್ವಾಮಿಗಳು, ಧಾರವಾಡದ ಮುರಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮಿಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗುವ ಈ ಸಮಾರಂಭದ ಅಧ್ಯಕ್ಷತೆಯನ್ನು ಸಚಿವರಾದ ಎಚ್.ಕೆ. ಪಾಟೀಲರು ವಹಿಸುವರು ಎಂದು ರಡ್ಡಿ ಬ್ಯಾಂಕಿನ ಚೇರಮನ್ ಕೆ.ಎಲ್. ಪಾಟೀಲರು ಹೇಳಿದರು.

ಸಹಕಾರ ಸಂಘಗಳ ನಿಬಂಧಕ ಟಿ.ಎಚ್.ಎಮ್. ಕುಮಾರ, ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮಾಜಿ ಅಧ್ಯಕ್ಷ ಡಿ.ಟಿ. ಪಾಟೀಲ, ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷ ಬಿ.ಎಸ್. ಪರಮಶಿವಯ್ಯ, ನ್ಯಾಫ್‌ಕಬ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ನಿ)ಡಿ. ಕೃಷ್ಣ, ನ್ಯಾಫ್‌ಕಬ್ ನಿರ್ದೇಶಕ ಜಯಕುಮಾರ, ಕೆ. ಕಾಳಪ್ಪ, ಸಹಕಾರ ಸಂಘಗಳ ಜಂಟಿ ನಿಬಂಧಕ ಸುರೇಶಗೌಡ, ಪಿ.ಮಹೇಶ, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್.ಕೆರೂರೆ, ಸಹಕಾರ ಸಂಘಗಳ ಉಪನಿಬಂಧಕ ರಮೇಶ ಬಗಲಿ, ಸಹಕಾರ ಸಂಘಗಳ ಸಹಾಯಕ ನಿಬಂಧಕ ನಿಂಗರಾಜ ಬೆಣ್ಣಿ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಕೆ.ಬಿ. ನಾಯಿಕ, ನಿರ್ದೇಶಕರಾದ ವ್ಹಿ.ಡಿ. ಕಾಮರಡ್ಡಿ, ಎ.ಜಿ. ಮುಳ್ಳೂರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ವ್ಹಿ.ಆರ್. ನಾಗಾವಿ ಮುಂತಾದವರು ಉಪಸ್ಥಿತರಿದ್ದರು.

### ಎಸ್‌ಎಸ್‌ಕೆ 'ನಮ್ಮೂರು ದಸರಾ' ಕಾರ್ಯಕ್ರಮದಲ್ಲಿ ಭಾಗಿಯಾದ ಕೆ.ಎಸ್. ಈಶ್ವರಪ್ಪ

# ಎಸ್‌ಎಸ್‌ಕೆ ಸಮಾಜ ಶಿಸ್ತಿನ ಸಮಾಜ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಸಂಸ್ಕೃತಿಗೆ ಉನ್ನತ ಸ್ಥಾನಮಾನವಿದೆ. ಹಿಂದೂ ಧರ್ಮವನ್ನು ಹಾಳು ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದ ಹಳೇ ಸರಾಫ್ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಸಹಸ್ರಾರ್ಜುನ ಸಮುದಾಯ ಭವನದ ಬಾಸ್ಕರಸಾ ಪವಾರ ಸಭಾಂಗಣದ ದಸರಾ ದರಬಾರ ವೇದಿಕೆಯಲ್ಲಿ ಜರುಗಿದ 'ನಮ್ಮೂರು ದಸರಾ-2024' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಎಸ್‌ಎಸ್‌ಕೆ ಸಮಾಜದಲ್ಲಿ ವರದಕ್ಷಿಣೆ ರಹಿತ ಮದುವೆಗಳು ನಡೆಯುತ್ತಿರುವದು ಕೇಳಿ ತುಂಬಾ ಸಂತೋಷವಾಯಿತು. ಇದೇ ರೀತಿ ಇತರೆ ಸಮಾಜದವರು ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ದಸರಾ ಹಬ್ಬದ ಸಂದರ್ಭದಲ್ಲಿ ಪ್ರತಿನಿತ್ಯ ಎಸ್.ಎಸ್.ಕೆ ಸಮಾಜದ ಮಹಿಳೆಯರು ಬೆಳಿಗ್ಗೆ ಎದ್ದು ದೇವಸ್ಥಾನಕ್ಕೆ ಆಗಮಿಸಿ ಜಗನ್ಮಾತೆಗೆ ವಿಶೇಷ ಪೂಜೆ ಸಲ್ಲಿಸಿ ಧನ್ಯರಾಗುತ್ತಿದ್ದಾರೆ. ಎಸ್.ಎಸ್.ಕೆ ಸಮಾಜ ಬಾಂಧವರ ಶಿಸ್ತು, ಆಚರಣೆ, ಭಕ್ತಿ ವಿಶಿಷ್ಟವಾಗಿದೆ. ಮುಂದಿನ ದಸರಾ ಹಬ್ಬದಲ್ಲಿ ಕುಟುಂಬ ಸಮೇತವಾಗಿ ಆಗಮಿಸಿ ದೇವಿಯ ದರ್ಶನ ಪಡೆಯುತ್ತೇನೆ ಎಂದು ಹೇಳಿದರು. ಇದಕ್ಕೂ ಮುಂಚೆ ಅವರು ಜಗದಂಬಾ ದೇವಿ ಹಾಗೂ ತುಳಜಾಭವಾನಿ ದೇವಿಯ ದರ್ಶನ ಪಡೆದರು.



> ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗದಗ ಎಸ್.ಎಸ್.ಕೆ ಸಮಾಜ ಪಂಚ ಕಮಿಟಿ ಅಧ್ಯಕ್ಷ ಫಕೀರಸಾ ಬಾಂಡಗೆ ಅವರು ವಹಿಸಿದ್ದರು. ವೇದಿಕೆ ಮೇಲೆ ಎಸ್.ಎಸ್.ಕೆ.ಸಮಾಜದ ಹಿರಿಯರು ಹಾಗೂ ಗಣ್ಯ ವ್ಯಾಪಾರಸ್ಥರಾದ ಬಾಬಾಸಾ ಬಾಕಳೆ, ಉದ್ಯಮಿ ಚಿದಾನಂದ ಕ್ಷತ್ರಿಯ, ಪಂಚ ಕಮಿಟಿಯ ಉಪಾಧ್ಯಕ್ಷ ರಾಜು ಬದಿ, ಗೌರವ ಕಾರ್ಯದರ್ಶಿ ವಿನೋದ ಶಿದ್ಲಿಂಗ, ಕಾರ್ಯದರ್ಶಿ ರವಿ ಶಿದ್ಲಿಂಗ, ದಸರಾ ಕಮಿಟಿಯ ಚೇರಮನ್‌ವಿಷ್ಣುಸಾ ಶಿದ್ಲಿಂಗ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಪಂಚ ಕಮಿಟಿಯ ಸದಸ್ಯರಾದ ಎನ್. ಆರ್. ಖಟವಟೆ, ವಿಶ್ವನಾಥಸಾ ಖಟವಟೆ, ಸುರೇಶಕುಮಾರ ಬದಿ, ಮಾರುತಿ ಪವಾರ, ಬಲರಾಮ ಬಸವಾ, ಶ್ರೀನಿವಾಸ ಬಾಂಡಗೆ, ಮೋತಿಲಾಲಸಾ ಪೂಜಾರಿ, ಪರಶುರಾಮಸಾ ಬದಿ, ಅನಿಲ್ ಖಟವಟೆ, ಗಣಪತಸಾ ಜಿತೂರಿ, ವಿನೋದ ಬಾಂಡಗೆ, ಪ್ರಕಾಶ ಬಾಕಳೆ, ಅಂಬಾಸಾ ಖಟವಟೆ, ವಿಶ್ವನಾಥ ಸೂಳಂಕಿ, ಸಾಗರ ಪವಾರ, ಸತೀಶ ದೇವಳೆ, ಶ್ರೀಕಾಂತ ಬಾಕಳೆ, ಮೋಹನಸಾ ಪವಾರ, ನಾಗರಾಜ ಖೋಡೆ, ಉಮಾಬಾಯಿ ಬೇವಿನಕಟ್ಟಿ, ಸ್ನೇಹಲತಾ ಕಬಾಡಿ ಮುಂತಾದವರು ಉಪಸ್ಥಿತರಿದ್ದರು. ಜಿ.ಎನ್. ಹಬೀಬ ನಿರೂಪಿಸಿದರು. ರೇಖಾ ಖಟವಟೆ ವಂದಿಸಿದರು.

# ಉಚಿತ ಮೋತಿ ಬಿಂದು ಶಸ್ತ್ರ ಚಿಕಿತ್ಸೆ



■ವಿಜಯಸಾಕ್ಷಿ ಸುದ್ದಿ, ಹುಲಕೋಟಿ

ಕೆ.ಎಚ್. ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ ಹುಲಕೋಟಿ ಹಾಗೂ ಎಂ.ಎಂ. ಜೋಶಿ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಇವರ ಸಹಯೋಗದಲ್ಲಿ, ಗದಗ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗದಗ ಇವರ ಸಹಕಾರದಲ್ಲಿ, ಎಚ್. ಕೆ. ಪಾಟೀಲ ಸೇವಾ ತಂಡದ ಸಹಾಯದಿಂದ ಅ.7ರಂದು 13 ಜನ ಫಲಾನುಭವಿಗಳಿಗೆ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು (ಮೋತಿ ಬಿಂದು) ಹುಲಕೋಟಿಯ ಕೆ.ಎಚ್. ಪಾಟೀಲ ಆಸ್ಪತ್ರೆಯಲ್ಲಿ ನಡೆಸಲಾಯಿತು.

ಸಂಸ್ಥೆಯ ಚೇರಮನ್ ಡಾ. ಎಸ್.ಆರ್. ನಾಗನೂರ ಹಾಗೂ ಗೌರವ ಕಾರ್ಯದರ್ಶಿ ಡಾ. ವೇಮನ್ ಆರ್.ಸಾವಕಾರ ಇವರು ಶಿಬಿರದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಎಂ.ಎಂ. ಜೋಶಿ ಆಸ್ಪತ್ರೆಯ ಖ್ಯಾತ ವೈದ್ಯರಿಂದ ನೆರವೇರಿಸಲಾಯಿತು. ಇದಕ್ಕೂ ಮೊದಲು ಫಲಾನುಭವಿಗಳಿಗೆ ಉಚಿತವಾಗಿ ಬಿಪಿ, ಶುಗರ್, ರಕ್ತ ತಪಾಸಣೆ ಮಾಡಲಾಯಿತು.

ಈ ಶಿಬಿರದಲ್ಲಿ ಕೆ.ಎಚ್. ಪಾಟೀಲ ಆಸ್ಪತ್ರೆಯ ಸಿಬ್ಬಂದಿಗಳು ಪಾಲ್ಗೊಂಡು ಸಹಾಯ-ಸಹಕಾರ ನೀಡಿ ಶಿಬಿರದ ಯಶಸ್ಸಿಗೆ ಶ್ರಮಿಸಿದರು.

# ಕೃಷಿ ವಸ್ತುಪ್ರದರ್ಶನ ರೈತರಿಗೆ ಪ್ರಯೋಜನಕಾರಿ



■ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ವಸ್ತುಪ್ರದರ್ಶನದಿಂದ ರೈತರ ಜ್ಞಾನ ವಿಸ್ತೃತಗೊಳ್ಳುತ್ತದೆ. ರೈತರಿಗೆ ಉಪಯೋಗಕಾರಿಯಾಗುವ ಇಂತಹ ಪ್ರದರ್ಶನ ಹಮ್ಮಿಕೊಂಡಿರುವುದು ಸೂಕ್ತವಾಗಿದೆ ಎಂದು ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಹೇಳಿದರು.

ನರೇಗಲ್ಲದ ಅಬ್ಬಿಗೇರಿ ಗ್ರಾಮದಲ್ಲಿ ಶರನ್ನವರಾತ್ರಿ ಉತ್ಸವದಲ್ಲಿ ಹಮ್ಮಿಕೊಂಡಿದ್ದ ಕೃಷಿ ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ರೇಣುಕಾ ಶಿವಾಚಾರ್ಯ ಶ್ರೀಗಳು ಮಾತನಾಡಿ, ಕೃಷಿ ಇಲಾಖೆ ರೈತರಿಗಾಗಿ ಹಲವಾರು ಕೃಷಿ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ನೀಡುತ್ತಿದ್ದು, ಅದರ ಸದುಪಯೋಗ ರೈತರು ಪಡೆದುಕೊಳ್ಳಬೇಕು ಎಂದು ಹೇಳಿದರು. ಕೃಷಿ ಉಪ ನಿರ್ದೇಶಕ ಪಾಲಾಕ್ಷಗೌಡ ಬಿ.ಆರ್. ಮಾತನಾಡಿ, ರೈತರು ಸಾಂಪ್ರದಾಯಿಕ ಪದ್ಧತಿಗಳ ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕೃಷಿ ಇಲಾಖೆಯ ಎಲ್ಲಾ ಯೋಜನೆಗಳ ಬಗ್ಗೆ ವಿವರವಾದ ವರದಿಯನ್ನು ಸಹಾಯಕ ಕೃಷಿ ನಿರ್ದೇಶಕರಾದ ರವೀಂದ್ರಗೌಡ ಮಾಲಿಪಾಟೀಲ ನೀಡಿದರು. ಸಾವಿತ್ರಿ ಸಂಕನಗೌಡ್ರ, ಶಿವಪುತ್ರ ದೊಡ್ಡಮನಿ ಸೇರಿದಂತೆ ಕೃಷಿ ಇಲಾಖೆಯ ಸಿಬ್ಬಂದಿ ಹಾಜರಿದ್ದರು. ಸಿರಿಧಾನ್ಯ ಮಹತ್ವ ಸಾರುವ ರಂಗೋಲಿ ಜನರ ಮನಸ್ಸು ಸೆಳೆಯಿತು.

# ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಇಲ್ಲಿಯ ಭಾರತೀಯ ವೈದ್ಯಕೀಯ ಸಂಸ್ಥೆಯ (ಐಎಂಎ) ಸಭಾಂಗಣದಲ್ಲಿ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜರುಗಿತು.

ಧಾರವಾಡ ಐಎಂಎ ಶಾಖೆಯ ಅಧ್ಯಕ್ಷರಾಗಿ ಡಾ. ನವೀನ ಮಂಕಣಿ ಅವರು ಅಧಿಕಾರ ಸ್ವೀಕರಿಸಿ ಮಾತನಾಡಿ, ವೈದ್ಯರಲ್ಲಿ ಏಕತೆ ಇರಬೇಕು. ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಅಂದಾಗ ಮಾತ್ರ ವೈದ್ಯ ವೃತ್ತಿಗೆ ಗೌರವ ಪ್ರಾಪ್ತವಾಗುತ್ತದೆ. ನಮ್ಮ ಕಾಲಾವಧಿಯಲ್ಲಿ ಆದಷ್ಟು ಸಮಾಜ ಸೇವೆಗೆ ಮುಂದಾಗುತ್ತೇವೆ ಎಂದು ವಾಗ್ದಾನ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆಎಂಸಿ ಅಧ್ಯಕ್ಷ ಡಾ. ಯೋಗಾನಂದರೆಡ್ಡಿ ಮಾತನಾಡಿ, ವೈದ್ಯರು ಯಾವಾಗಲೂ ಸಮಾಜಮುಖಿ ಕೆಲಸವನ್ನು ಮಾಡುತ್ತಿರುತ್ತಾರೆ. ವೃತ್ತಿ ಬದ್ಧತೆ ತೋರುತ್ತಾರೆ. ಇದರ ಜತೆಗೆ ತಮ್ಮ ಆರೋಗ್ಯ ಮತ್ತು ವೈಯಕ್ತಿಕ ಬದುಕಿನತ್ತ ಹೆಚ್ಚು ಲಕ್ಷ್ಯ ಕೊಡಬೇಕು ಎಂದು ವಿನಂತಿಸಿದರು.

ಕಾರ್ಯದರ್ಶಿಯಾಗಿ ಡಾ. ಸುಹಾಸ ಎಚ್., ಖಜಾಂಚಿಯಾಗಿ ಡಾ. ಸಪ್ನ ಡಿ.ಎಸ್. ಅಧಿಕಾರ ಸ್ವೀಕರಿಸಿದರು. ನಿಕಟಪೂರ್ವ ಅಧ್ಯಕ್ಷ ಡಾ. ಸತೀಶ ಇರಕಲ್, ಕಾರ್ಯದರ್ಶಿ ಡಾ. ಕಿರಣ ಕುಲಕರ್ಣಿ, ಕಾರ್ಯಕ್ರಮದ ಅಧ್ಯಕ್ಷ ಡಾ. ಸುಧೀರ ಜಂಬಗಿ, ಮಹಿಳಾ ವೈದ್ಯರ ವಿಭಾಗದ ಅಧ್ಯಕ್ಷೆ ಡಾ. ಕವಿತಾ ಮಂಕಣಿ, ಡಾ. ಲಕ್ಕೋಳ, ಡಾ. ಮಧುಸೂದನ ಕೆ, ಡಾ. ವಿ.ಆರ್. ಸೊರಗಾವಿ, ಡಾ. ಪವನ್ ಪಾಟೀಲ, ಡಾ. ಸಂತೋಷ ಪಾಟೀಲ ಉಪಸ್ಥಿತರಿದ್ದರು.



# ರಸ್ತೆ ಸರಿಪಡಿಸದಿದ್ದಲ್ಲಿ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಕೇಂದ್ರದಲ್ಲಿರುವ ಜೆ.ಟಿ. ಕಾಲೇಜ್ ಎದುರಿನ ರಸ್ತೆಯು ಗದಗ-ಬೆಟಗೇರಿ ಅವಳಿ ನಗರವನ್ನು ಜೋಡಿಸಿದ ಪ್ರಮುಖ ರಸ್ತೆಯಾಗಿದ್ದು, ಸದರಿ ಕಾಲೇಜಿಗೆ ಹೊಂದಿದ ತಿರುವಿನಿಂದ ರೇಲ್ವೆ ಒಳ ಸೇತುವೆ ಸೇರುವ ರಸ್ತೆಯು ತಿರುವಿನುದ್ದಕ್ಕೂ ತಗ್ಗುಗಳ ಆಗರವಾಗಿದೆ. ನಿತ್ಯವೂ ಕಾಲೇಜಿಗೆ ಸಹಸ್ರಾರು ವಿದ್ಯಾರ್ಥಿಗಳು ಸಂಚರಿಸುತ್ತಲಿದ್ದು, ಸಾರ್ವಜನಿಕರ ಸಂಚಾರವನ್ನು ಹಿಂಸೆಗೀಡುಮಾಡಿದೆ ಎಂದು ಎಂದು ಸಾರ್ವಜನಿಕರ ಕುಂದು-ಕೊರತೆಗಳ ನಿವಾರಣಾ ಕೇಂದ್ರದ ಜಿಲ್ಲಾ ಅಧ್ಯಕ್ಷರಾದ ಎಮ್. ಸಲೀಮ್‌ಅಹ್ಮದ್ ಮಾಳೇಕೊಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಷ್ಟು ತೀವ್ರಗತಿಯಲ್ಲಿ ರಸ್ತೆ ಹಾಳಾಗಲು ಕಳಪೆ ಕಾಮಗಾರಿಯೇ ಕಾರಣ. ಗದಗ-ಬೆಟಗೇರಿ ನಗರಸಭೆಯ ಆಡಳಿತಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳು ರಸ್ತೆಯನ್ನು ಕೂಡಲೇ ಉತ್ತಮ ಗುಣಮಟ್ಟದಲ್ಲಿ ನಿರ್ಮಿಸದಿದ್ದಲ್ಲಿ ರಸ್ತೆ ತಡೆ ನಡೆಸಬೇಕಾಗುತ್ತದೆ ಎಂದು ಎಮ್. ಸಲೀಮ್‌ಅಹ್ಮದ್ ಮಾಳೇಕೊಪ್ಪ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಧುರೀಣರಾದ

ರಾಮು ಕೆಂಚಗುಂಡಿ, ನೇಕಾರ ಕಾರ್ಮಿಕ ಧುರೀಣ ಬಶೀರಅಹ್ಮದ ಮುಳಗುಂದ, ಅಲ್ಪ ಸಂಖ್ಯಾತ ಧುರೀಣ ಮುಸ್ತಾಖ್‌ಅಹ್ಮದ್ ಮುಲ್ಲಾ, ದಲಿತ ಧುರೀಣ ಫಕೀರಪ್ಪ ದೊಡ್ಡಮನಿ, ತೌಫೀಖ್ ಮಜ್ಜಗಿ, ಅಸ್ಲಮ್ ಖಾದರನವರ ಇತರರು ಹಾಳಾದ ರಸ್ತೆಯ ಪೋಟೋದೊಂದಿಗೆ ಜಿಲ್ಲಾಧಿಕಾರಿಗೆ ಸಲ್ಲಿಸಿದ ಪ್ರತಿಭಟನಾ ನೋಟೀಸ್‌ನಲ್ಲಿ ಎಚ್ಚರಿಸಿದ್ದಾರೆ.

# ಬದುಕಿನ ಉನ್ನತಿಗೆ ಸಂಸ್ಕಾರವೇ ಅಡಿಪಾಯ

▶▶ಮೊದಲನೇ ಪುಟದಿಂದ

ಶ್ರೀ ರಂಭಾಪುರಿ ಪೀಠದ ಈ ದಸರಾ ಮಹೋತ್ಸವ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಸ್ಫೂರ್ತಿಯನ್ನು ಉಚಿಟು ಮಾಡುತ್ತದೆ. ಶ್ರೀ ರಂಭಾಪುರಿ ಜಗದ್ಗುರುಗಳವರ ವಿಚಾರ ಧಾರೆಗಳು ಸಕಲ ಭಕ್ತರಿಗೆ ಆಶಾಕಿರಣವಾಗಿವೆ. ಸಮಾಜವನ್ನು ಸರ್ವ ಜನಾಂಗದ ಶಾಂತಿಯ ತೋಟ ಮಾಡುವ ದಿಶೆಯಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು ಶ್ರಮಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

'ಧಾರ್ಮಿಕತೆಯಲ್ಲಿ ಮಹಿಳೆಯ ಪಾತ್ರ' ವಿಷಯದ ಕುರಿತು ತುಮಕೂರಿನ ಡಾ. ಮೀನಾಕ್ಷಿ ಖಂಡಿಮಠ ಮಾತನಾಡಿ, ಹೆಣ್ಣು ಸಂಸಾರದ ಕಣ್ಣು. ಮಹಿಳೆಯರಲ್ಲಿ ಇರುವ ಧಾರ್ಮಿಕ ಶ್ರದ್ಧೆ ಪುರುಷರಲ್ಲಿ ಕಾಣುವುದು ಅತಿ ವಿರಳ. ಮಹಿಳೆ ತಾಯಿಯಾಗಿ, ಸಹೋದರಿಯಾಗಿ, ಹೆಂಡತಿಯಾಗಿ ಪ್ರತಿ ಹಂತದಲ್ಲಿ ಕುಟುಂಬದ ಶ್ರೇಯಸ್ಸಿಗೆ ಶ್ರಮಿಸುತ್ತಾಳೆ. ಭಾರತೀಯ ಉತ್ಕೃಷ್ಟ ಧಾರ್ಮಿಕ ಸಂಪ್ರದಾಯ, ಆಚರಣೆಗಳನ್ನು ಪರಿಪಾಲಿಸಿ ಇಡೀ ಕುಟುಂಬದವರಿಗೆಲ್ಲ ಸಂಸ್ಕೃತಿಯನ್ನು ಕಲಿಸುತ್ತಾರೆ. ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಅತ್ಯಾಚಾರಗಳು ಹೆಚ್ಚುತ್ತಿರುವುದು ಕಳವಳಕಾರಿಯಾದ ವಿಚಾರವಾಗಿದೆ. ಕಿರಿ ವಯಸ್ಸಿನಲ್ಲಿ ಕೊಟ್ಟ ಸಂಸ್ಕಾರಗಳು ಕೊನೆಯತನಕ ಕಾಪಾಡಿಕೊಂಡು ಬರುತ್ತವೆ ಎಂದರು.

ಶ್ರೀನಿವಾಸ ಸರಡಗಿ ರೇವಣಸಿದ್ಧೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಬಿಳಕಿ ರಾಚೋಟೇಶ್ವರ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಹರಪನಹಳ್ಳಿ ವರಸದ್ಯೋಜಾತ ಶಿವಾಚಾರ್ಯರು ಪ್ರಾಸ್ತಾವಿಕ ಮಾತನಾಡಿ, ವೀರಶೈವ ಧರ್ಮದಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಒದಗಿಸಿ ಕೊಟ್ಟ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಅರಿವಿನ ದಾರಿಯಲ್ಲಿ ನಡೆದು ಆದರ್ಶ ಬದುಕನ್ನು ಕಟ್ಟಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ಮಂಜುನಾಥ ಕುನ್ನೂರು, ವಿ.ಪ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಬಸನಗೌಡ ಪಾಟೀಲ, ಈ.ಎಸ್. ಪಾಟೀಲ, ಸಂಜೀವ ನೀರಲಗಿ, ಲಕ್ಷ್ಮೇಶ್ವರದ ಆನಂದಸ್ವಾಮಿ ಗಡ್ಡದೇವರಮಠ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಹುಬ್ಬಳ್ಳಿಯ ಮದ್ವೀರಶೈವ ಸ.ಸಂ. ಹುಬ್ಬಳ್ಳಿ ತಾಲೂಕ ಘಟಕದ ಅಧ್ಯಕ್ಷ ಪ್ರಕಾಶ ಬೆಂಡಿಗೇರಿ ಸ್ವಾಗತಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ವೀರೇಶ ಕಿತ್ತೂರ ಮತ್ತು ರಾಜಗುರು ಡಾ. ಗುರುಸ್ವಾಮಿ ಕಲಿಕೇರಿ ಗದಗ ಇವರಿಂದ ಸಂಗೀತ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ಹಾಗೂ ಗದಗಿನ ಶಾರದಾ ಶಿವಾನಂದಯ್ಯ ಹಿರೇಮಠ ನಿರೂಪಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka